VOLUME: 16 | 01 APRIL 2026 | ಮಂಗಳವಾರ | RS: 2 | PAGE: 06 ISSUE: 62 ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ನಿರ್ದೇಶಕ-ನಟ ರಿಷಬ್ ಶೆಟ್ಟಿ ಸದ್ಯ ಹೈದರಾಬಾದ್‌ನಲ್ಲಿ ಬೀಡುಬಿಟ್ಟಿದ್ದು, ನಿರ್ದೇಶಕ ಪ್ರಶಾಂತ್ ವರ್ಮಾ ಅವರ 'ಜೈ ಹನುಮಾನ್' ಚಿತ್ರದ ಸೆಟ್‌ಗೆ ಸೇರಲು ತಯಾರಿ ನಡೆಸುತ್ತಿದ್ದಾರೆ. ಅಂಜನಾದ್ರಿ ಬೆಟ್ಟದಲ್ಲಿ ನಡೆದ ಮುಹೂರ್ತದ ನಂತರ ಚಿತ್ರೀಕರಣ ಪ್ರಾರಂಭವಾದ ಈ ಯೋಜನೆಯು ಚುರುಕಾದ ವೇಗದಲ್ಲಿ ಪ್ರಗತಿಯಲ್ಲಿದೆ. ಮೇ ತಿಂಗಳಲ್ಲಿ ಚಿತ್ರೀಕರಣ ಪ್ರಾರಂಭಿಸುವ ನಿರೀಕ್ಷೆಯಿದೆ ಮತ್ತು ಸದ್ಯ ಲುಕ್ ಟೆಸ್ಟ್ ಮತ್ತು ಇತರ ನಿರ್ಮಾಣ ಪೂರ್ವ ಸಿದ್ಧತೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.



BHARATHA SARATHI
KANNADA DAILY NEWS PAPER
CALL 9740160669

# ಭಾರತ ಸಾರಥಿ

RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



# ರಾಜ್ಯದ ಆರ್ಥಿಕತೆ ಸುಭದ್ರ, ಆಯವ್ಯಯ ಪತ್ರವೇ ಶ್ವೇತಪತ್ರ: ಬಿಜೆಪಿಗೆ ಸಿದ್ದರಾಮಯ್ಯ ತಿರುಗೇಟು

ಬೆಂಗಳೂರು: ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಬೇಕು ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಒತ್ತಾಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಪ್ರತಿಕ್ರಿಯೆ ನೀಡಿದ್ದಾರೆ. ಕಳೆದ ತಿಂಗಳಷ್ಟೇ ಮಂಡಿಸಿರುವ ರಾಜ್ಯದ ಆಯವ್ಯಯ ಪತ್ರವೇ ಶ್ವೇತಪತ್ರವಾಗಿದ್ದು, ಅದನ್ನು ವಿಧಾನಮಂಡಲದ ಉಭಯ ಸದನಗಳು ಚರ್ಚಿಸಿ ಅಂಗೀಕರಿಸಿವೆ ಎಂದು ಅವರು ಸ್ಪಷ್ಟಪಡಿಸಿದರು.

ರಾಜ್ಯದ ಆರ್ಥಿಕತೆ ದಿವಾಳಿ ಸ್ಥಿತಿಯಲ್ಲಿದೆ ಎಂಬ ಆರೋಪವು ಬಿಜೆಪಿಯ ರಾಜಕೀಯ ಹತಾಶೆ, ಅಸೂಯೆ ಮತ್ತು ಆಡಳಿತದ ಅನುಭವದ ಕೊರತೆಯನ್ನು ತೋರಿಸುತ್ತದೆ ಎಂದು ಸಿದ್ದರಾಮಯ್ಯ ಕಿಡಿಕಾರಿದರು. ಯಾವ ಇಲಾಖೆಯೂ ನೌಕರರಿಗೆ ಸಂಬಳ ನೀಡಲಾಗದ ಸ್ಥಿತಿಯಲ್ಲಿ ಇಲ್ಲ. ರಾಜ್ಯ ಸರ್ಕಾರ ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಸುಭದ್ರವಾಗಿದೆ ಎಂದು ಅವರು ಹೇಳಿದರು.

ಮುಖ್ಯಮಂತ್ರಿ ಅವರು ತಿಳಿಸಿದಂತೆ, 2025–26ನೇ ಸಾಲಿನ ರಾಜ್ಯ ಬಜೆಟ್ ಗಾತ್ರ 4,48,004 ಕೋಟಿ ರೂ. ಆಗಿದ್ದು, ಕಳೆದ ವರ್ಷದಿಗಿಂತ 38,455 ಕೋಟಿ ರೂ. ಹೆಚ್ಚಾಗಿದೆ. ರಾಜ್ಯದ ಬಜೆಟ್ ಗಾತ್ರದಲ್ಲಿ ಶೇ.9.4ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರದ ಬಜೆಟ್ ಬೆಳವಣಿಗೆ ಕೇವಲ ಶೇ.5.6ರಷ್ಟಿದೆ ಎಂದು ಅವರು ಹೇಳಿದರು.

ರಾಜ್ಯದ ಆರ್ಥಿಕತೆ ದೇಶದ ಸರಾಸರಿಗಿಂತ ಉತ್ತಮ ಸ್ಥಿತಿಯಲ್ಲಿದೆ ಎಂದು ಹೇಳಿದ ಮುಖ್ಯಮಂತ್ರಿ, 2025–26ರಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ.7.4 ಇದ್ದರೆ, ಕರ್ನಾಟಕದ ಜಿಎಸ್‌ಡಿಪಿ ಬೆಳವಣಿಗೆ ಶೇ.8.1ಕ್ಕೆ ತಲುಪಿದೆ ಎಂದು ವಿವರಿಸಿದರು. ರಾಜ್ಯದ ಜಿಎಸ್‌ಡಿಪಿ ಈ ವರ್ಷ 33,05,500 ಕೋಟಿ ರೂ. ಆಗಿದೆ ಎಂದರು.

ಸಾಲ ಮತ್ತು ವಿತ್ತೀಯ ಕೊರತೆ ಕುರಿತೂ ಮುಖ್ಯಮಂತ್ರಿ ಬಿಜೆಪಿ ವಿರುದ್ಧ ತೀವ್ರ ಟೀಕೆ ನಡೆಸಿದರು. ರಾಜ್ಯದ ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.24.94ರಷ್ಟಿದ್ದು, ಇದು ನಿಗದಿತ ಮಿತಿಯೊಳಗೇ ಇದೆ. ಆದರೆ ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು ಜಿಡಿಪಿಯ ಶೇ.55.6ರಷ್ಟಿವೆ. ದಿವಾಳಿಯಾಗಿರುವುದು ಯಾವ ಸರ್ಕಾರ ಎಂದು ಅವರು ಪ್ರಶ್ನಿಸಿದರು.

ವಿತ್ತೀಯ ಕೊರತೆಯ ವಿಷಯದಲ್ಲಿಯೂ ರಾಜ್ಯ ಸರ್ಕಾರ ನಿಯಮಿತ ಮಿತಿಯೊಳಗೇ ಇದೆ ಎಂದು ಸಿದ್ದರಾಮಯ್ಯ ಹೇಳಿದರು. ರಾಜ್ಯದ ವಿತ್ತೀಯ ಕೊರತೆ ಜಿಎಸ್‌ಡಿಪಿಯ ಶೇ.3ರೊಳಗಿದ್ದು, ಕೇಂದ್ರ ಸರ್ಕಾರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3ರಷ್ಟಿದೆ ಎಂದು ಅವರು ವಿವರಿಸಿದರು.



ಬಿಜೆಪಿ ಆಡಳಿತದ ರಾಜ್ಯಗಳ ಆರ್ಥಿಕ ಸ್ಥಿತಿಯನ್ನೂ ಮುಖ್ಯಮಂತ್ರಿ ಉಲ್ಲೇಖಿಸಿದರು. ಮಹಾರಾಷ್ಟ್ರದ ಸಾಲ ಬಾಕಿ 11.02 ಲಕ್ಷ ಕೋಟಿ ರೂ. ಇದ್ದು, ಬಿಹಾರದ ವಿತ್ತೀಯ ಕೊರತೆ ಜಿಎಸ್‌ಡಿಪಿಯ ಶೇ.11.8ರಷ್ಟಿದೆ. ರಾಜಸ್ಥಾನ ಮತ್ತು ಮಧ್ಯಪ್ರದೇಶಗಳಲ್ಲಿ ವಿತ್ತೀಯ ಕೊರತೆ ಶೇ.3.7ರಷ್ಟಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಕರ್ನಾಟಕದ ವಿರುದ್ಧ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂಬ ಆರೋಪವನ್ನೂ ಮುಖ್ಯಮಂತ್ರಿ ಮಾಡಿದರು. ತೆರಿಗೆ ಹಂಚಿಕೆ, ಜಿಎಸ್‌ಟಿ ಪರಿಹಾರ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುದಾನದಲ್ಲಿ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ ಎಂದರು.

> ಸಾಲ ಮತ್ತು ವಿತ್ತೀಯ ಕೊರತೆ ಕುರಿತೂ ಮುಖ್ಯಮಂತ್ರಿ ಬಿಜೆಪಿ ವಿರುದ್ಧ ತೀವ್ರ ಟೀಕೆ ನಡೆಸಿದರು. ರಾಜ್ಯದ ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.24.94ರಷ್ಟಿದ್ದು, ಇದು ನಿಗದಿತ ಮಿತಿಯೊಳಗೇ ಇದೆ. ಆದರೆ ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು ಜಿಡಿಪಿಯ ಶೇ.55.6ರಷ್ಟಿವೆ. ದಿವಾಳಿಯಾಗಿರುವುದು ಯಾವ ಸರ್ಕಾರ ಎಂದು ಅವರು ಪ್ರಶ್ನಿಸಿದರು. ವಿತ್ತೀಯ ಕೊರತೆಯ ವಿಷಯದಲ್ಲಿಯೂ ರಾಜ್ಯ ಸರ್ಕಾರ ನಿಯಮಿತ ಮಿತಿಯೊಳಗೇ ಇದೆ ಎಂದು ಸಿದ್ದರಾಮಯ್ಯ ಹೇಳಿದರು.

ಹದಿನಾಲ್ಕನೇ ಹಣಕಾಸು ಆಯೋಗ ರಾಜ್ಯದ ತೆರಿಗೆ ಪಾಲನ್ನು ಶೇ.4.72ಕ್ಕೆ ನಿಗದಿ ಮಾಡಿದ್ದರೆ, ಹದಿನೈದನೇ ಹಣಕಾಸು ಆಯೋಗ ಅದನ್ನು ಶೇ.3.64ಕ್ಕೆ ಇಳಿಸಿತ್ತು. ರಾಜ್ಯದ ತೀವ್ರ ಪ್ರತಿಭಟನೆಯ ಬಳಿಕ ಹದಿನಾರನೇ ಹಣಕಾಸು ಆಯೋಗ ಇದೀಗ ಅದನ್ನು ಶೇ.4.13ಕ್ಕೆ ನಿಗದಿ ಮಾಡಿದೆ ಎಂದು ಅವರು ಹೇಳಿದರು.

ಜಿಎಸ್‌ಟಿ ಪರಿಹಾರ ನಿಲ್ಲಿಸಿದ್ದರಿಂದ ರಾಜ್ಯಕ್ಕೆ ಭಾರೀ ನಷ್ಟ ಉಂಟಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು. 2023–24ರಲ್ಲಿ ರಾಜ್ಯಕ್ಕೆ 30,871 ಕೋಟಿ ರೂ. ಮತ್ತು 2024–25ರಲ್ಲಿ 40,368 ಕೋಟಿ ರೂ.ಗಳಷ್ಟು ಜಿಎಸ್‌ಟಿ ಕೊರತೆ ಉಂಟಾಗಲಿದೆ ಎಂದು ಅಂದಾಜಿಸಲಾಗಿದೆ. 15ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದ 2023–24ರಿಂದ 2025–26ರವರೆಗೆ ರಾಜ್ಯಕ್ಕೆ 39,500 ಕೋಟಿ ರೂ. ನಷ್ಟವಾಗಿದೆ ಎಂದು ಅವರು ಆರೋಪಿಸಿದರು.

2017ರಿಂದ ಜಿಎಸ್‌ಟಿ ಜಾರಿಗೆ ಬಂದ ನಂತರ ಹಾಗೂ ಕೇಂದ್ರ ಸರ್ಕಾರದ ಹಣಕಾಸು ನೀತಿಗಳಿಂದ ಕರ್ನಾಟಕಕ್ಕೆ ಒಟ್ಟು 2 ಲಕ್ಷ ಕೋಟಿ ರೂ.ಗಿಂತ ಹೆಚ್ಚು ನಷ್ಟವಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು. ಆದರೂ ರಾಜ್ಯದ ಆರ್ಥಿಕತೆ ಹಳಿ ತಪ್ಪದಂತೆ ಜಾಗ್ರತೆ ಮತ್ತು ಬದ್ಧತೆಯಿಂದ ಮುನ್ನಡೆಸುತ್ತಿದ್ದೇವೆ ಎಂದು ಹೇಳಿದರು.

ಕಳೆದ ವರ್ಷ ಕೇಂದ್ರ ಸರ್ಕಾರ ಜಿಎಸ್‌ಟಿ ದರ ಪರಿಷ್ಕರಣೆ ಮಾಡಿದ ಬಳಿಕ ರಾಜ್ಯದ ಜಿಎಸ್‌ಟಿ ಸಂಗ್ರಹಣೆಯ ಬೆಳವಣಿಗೆ ಕುಂಠಿತವಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಈ ಪರಿಷ್ಕರಣೆಗೆ ಮೊದಲು ಮಾಸಿಕ ಜಿಎಸ್‌ಟಿ ಸಂಗ್ರಹಣೆಯು ಶೇ.10ರಷ್ಟು ಏರಿಕೆಯಾಗುತ್ತಿದ್ದರೆ, ನಂತರ ಅದು ಶೇ.4ಕ್ಕೆ ಇಳಿದಿದೆ. ಇದರ ಪರಿಣಾಮವಾಗಿ 2025–26ರಲ್ಲಿ 10,000 ಕೋಟಿ ರೂ. ಹಾಗೂ 2026–27ರಲ್ಲಿ 15,000 ಕೋಟಿ ರೂ.ಗಳಷ್ಟು ಕೊರತೆ ಎದುರಾಗಬಹುದು ಎಂದು ಹೇಳಿದರು. ರಾಜ್ಯ ಸರ್ಕಾರ ಸಾಲ ಮಾಡುವುದನ್ನು ತಪ್ಪೆಂದು ನಾನು ಎಂದೂ ಹೇಳಿಲ್ಲ. ಆದರೆ ಸಾಲದ ಹಣವನ್ನು ಮೂಲಸೌಕರ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಹೂಡಿಕೆ ಮಾಡಿದಾಗ ಅದು ರಾಜ್ಯದ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

ಈ ವೇಳೆ ಕೇಂದ್ರ ಸರ್ಕಾರದ ಸಾಲದ ಮೇಲೂ ಅವರು ವಾಗ್ದಾಳಿ ನಡೆಸಿದರು. 2014ರಲ್ಲಿ 53.11 ಲಕ್ಷ ಕೋಟಿ ರೂ. ಇದ್ದ ಕೇಂದ್ರದ ಸಾಲ, 2027ರ ವೇಳೆಗೆ 218.63 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ.

# ಮನೆಯಲ್ಲಿ ಸಂಗ್ರಹ ಮಾಡಿದ್ದ ಪೆಟ್ರೋಲ್ ಕ್ಯಾನ್‌ಗೆ ಬೆಂಕಿ

ಧಾರವಾಡ: ಮನೆಯಲ್ಲಿ ಸಂಗ್ರಹ ಮಾಡಿದ್ದ ಪೆಟ್ರೋಲ್ ಕ್ಯಾನ್‌ಗೆ ಬೆಂಕಿ ತಗುಲಿದ ಪರಿಣಾಮ ಗೃಹಿಣಿಯೊಬ್ಬರು ತೀವ್ರವಾಗಿ ಗಾಯಗೊಂಡ ಘಟನೆ ಧಾರವಾಡ ತಾಲೂಕಿನ ತಡಕೋಡ ಗ್ರಾಮದ ಹರಿಜನಕೇರಿ ಓಣಿಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಪೂರ್ಣಿಮಾ ಕಲ್ಲಪ್ಪ ಹಾದಿಮನಿ (32) ಎಂಬ ಗೃಹಿಣಿಯೇ ತೀವ್ರವಾಗಿ ಗಾಯಗೊಂಡಿದ್ದು, ಶೇ.80 ರಷ್ಟು ದೇಹ ಸುಟ್ಟಿರುವ ಕಾರಣ ಆಕೆಯ ಸ್ಥಿತಿ ಚಿಂತಾಜನಕವಾಗಿದೆ.

ಪೂರ್ಣಿಮಾ ಅವರಿಗೆ ಜಿಲ್ಲಾಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್‌ಗೆ ರವಾನಿಸಲಾಗಿದೆ. ಪೆಟ್ರೋಲ್ ಅಭಾವ ಆಗಿದೆ ಎಂಬ ವದಂತಿ ಹಬ್ಬಿದ ಹಿನ್ನೆಲೆಯಲ್ಲಿ ಪೆಟ್ರೋಲ್‌ಅನ್ನು ಕ್ಯಾನ್‌ನಲ್ಲಿ ಸಂಗ್ರಹಿಸಿ, ಮನೆಯ ಫ್ರಿಡ್ಜ್ ಬಳಿ ಇಡಲಾಗಿತ್ತು.

ಪೂರ್ಣಿಮಾ ಅವರಿಗೆ ಜಿಲ್ಲಾಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್‌ಗೆ ರವಾನಿಸಲಾಗಿದೆ. ಪೆಟ್ರೋಲ್ ಅಭಾವ ಆಗಿದೆ ಎಂಬ ವದಂತಿ ಹಬ್ಬಿದ ಹಿನ್ನೆಲೆಯಲ್ಲಿ ಪೆಟ್ರೋಲ್‌ಅನ್ನು ಕ್ಯಾನ್‌ನಲ್ಲಿ ಸಂಗ್ರಹಿಸಿ, ಮನೆಯ ಫ್ರಿಡ್ಜ್ ಬಳಿ ಇಡಲಾಗಿತ್ತು. ಪೂರ್ಣಿಮಾ ಅಡುಗೆ ಮನೆಯಲ್ಲಿದ್ದಾಗ ಏಕಾಏಕಿ ಕ್ಯಾನ್‌ಗೆ ಬೆಂಕಿ ಹೊತ್ತಿಕೊಂಡು ಸ್ಫೋಟಗೊಂಡಿದ್ದು, ಇಡೀ ಮನೆಗೆ ಬೆಂಕಿ ಆವರಿಸಿದೆ.

ಅಡುಗೆ ಮನೆಯಲ್ಲಿ ಸಿಲುಕಿದ್ದ ಅತ್ತಿಗೆಯನ್ನು ಮೈದುನ ಯಲ್ಲಪ್ಪ ಕಾಪಾಡಿದ್ದು, ಈ ವೇಳೆ ಅವನಿಗೂ ಗಾಯಗಳಾಗಿವೆ. ಆದರೆ ಮಹಿಳೆಯ ಸ್ಥಿತಿ ಮಾತ್ರ ಗಂಭೀರವಾಗಿದೆ. ಈ ವೇಳೆ ಮನೆಯ ಸದಸ್ಯರು ಹೊರಗಡೆ ಕುಳಿತಿದ್ದರಿಂದ ಪಾರಾಗಿದ್ದಾರೆ. ಅಗ್ನಿ ಶಾಮಕದಳ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಬೆಂಕಿ ನಂದಿಸುವ ಕೆಲಸ ಮಾಡಿದ್ದಾರೆ. ಮದುವೆ ಕಾರ್ಯಕ್ರಮಗಳಿಗೆ ರಥ ಓಡಿಸೊದಕ್ಕೆ ಇವರು ಪೆಟ್ರೋಲ್ ಸ್ಟಾಕ್ ಮಾಡಿದ್ದರು ಎಂದು ತಿಳಿದು ಬಂದಿದೆ. ಸದ್ಯ ಗರಗ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.



ತುಮಕೂರಿನ ಶ್ರೀ ಸಿದ್ದಗಂಗಾ ಮಠದಲ್ಲಿ ಆಯೋಜಿಸಲಾಗಿರುವ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಮಂಗಳವಾರ ರಾತ್ರಿ ಭಾರತೀಯ ವಾಯು ಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಹೆಚ್.ಎ.ಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

# 'ಸಿಎಂ 5 ದಿನ ಇಲ್ಲಿ ಬಂದು ಕೂತಿದ್ದೇಕೆ?'

ಬಾಗಲಕೋಟೆ: ಕಾಂಗ್ರೆಸ್ಸಿಗೆ ಮತ ಕೊಡದಿದ್ದರೆ ಗ್ಯಾರಂಟಿಗಳು ನಿಲ್ಲಲಿವೆ ಎಂದು ಹೆದರಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ.

ಬಿಜೆಪಿ ಪ್ರಚಾರದ ವೇಳೆ ಇಂದು ಮಾತನಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಮಾಡಿದ್ದರೆ ಹಾಗೂ ಗ್ಯಾರಂಟಿಗಳ ಬಗ್ಗೆ ಅವರಿಗೆ ವಿಶ್ವಾಸ ಇದ್ದರೆ, ಮುಖ್ಯಮಂತ್ರಿಯಾಗಿ 5 ದಿನ ಇಲ್ಲಿ ಬಂದು ಅವರೇಕೆ ಕೂರಬೇಕಿತ್ತು ಎಂದು ಕೇಳಿದರು. ಬಾಗಲಕೋಟೆಯಲ್ಲಿ ಏನೇ ತಿಪ್ಪರಲಾಗ ಹಾಕಿದರೂ ಬಿಜೆಪಿ ಗೆಲ್ಲಲಿದೆ ಎಂಬ ಪೊಲೀಸ್ ಗುಪ್ತಚರ ಇಲಾಖೆ ವರದಿ ಹೋಗಿದೆ ಎಂದು ತಿಳಿಸಿದರು.



ಕಾಂಗ್ರೆಸ್ ಸರಕಾರದಲ್ಲಿ ಹೆಣ್ಮಕ್ಕಳಿಗೆ ಬಸ್ ವ್ಯವಸ್ಥೆ ಇಲ್ಲವಾಗಿದೆ. ಮಕ್ಕಳು ಶಾಲೆ, ಕಾಲೇಜಿಗೆ ಹೋಗಲಾಗದ ಸ್ಥಿತಿ ಬಂದಿದೆ. ಗೃಹಲಕ್ಷ್ಮಿ ಮೂಲಕ 2 ಸಾವಿರ ಕೊಡುವುದಾಗಿ ಹೇಳುತ್ತಾರೆ. ಆದರೆ, ಮದ್ಯ ಕುಡಿಸಿ, ಕುಡಿಸಿ ಬಡ ಕುಟುಂಬದವರು ಹಾಳಾಗಿದ್ದಾರೆ ಎಂದು ತಿಳಿಸಿದರು.

ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಲಕ್ಷಾಂತರ ಯುವಕರು ಪ್ರತಿಭಟನೆ ನಡೆಸುವಂತಾಗಿದೆ ಎಂದ ಅವರು, 420 ಕೆಲಸ ಮಾಡುವವರನ್ನು ಜೈಲಿಗೆ ಹಾಕುವುದಿಲ್ಲ; ಶಾಂತಿಯುತ ಮೆರವಣಿಗೆ ಮಾಡುವ ಹಿಂದೂ ಕಾರ್ಯಕರ್ತರನ್ನು ಜೈಲಿಗೆ ಹಾಕುತ್ತಾರೆ ಎಂದು ಆಕ್ಷೇಪಿಸಿದರು. ಹಿಂದೆ ಬಿಜೆಪಿ ಅವಧಿಯಲ್ಲಿ ರೈತ ಹೊಲಕ್ಕೆ ಟ್ರಾನ್ಸ್‌ಫಾರ್ಮರ್ ಹಾಕಲು 25 ಸಾವಿರ ಕೊಟ್ಟರೆ ಸಾಕಿತ್ತು. ಇವತ್ತು ಲಕ್ಷಾಂತರ ರೂ. ಖರ್ಚು ಮಾಡಬೇಕಿದೆ ಎಂದು ಗಮನ ಸೆಳೆದರು.

# ಯತ್ನಾಳ್ ಬಿಜೆಪಿ ಪರ ಪ್ರಚಾರ

ಬೆಂಗಳೂರು: ಉಪಚುನಾವಣೆ ನಡೆಯುವ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಅಭ್ಯರ್ಥಿಗಳ ಪರವಾಗಿ ಯಾರೇ ಬಂದು ಪ್ರಚಾರ ನಡೆಸಿದರೂ ಸ್ವಾಗತಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಸನಗೌಡ ಪಾಟೀಲ್ ಯತ್ನಾಳ್ ಅವರು ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿದರೆ ನೀವು ಒಪ್ಪುತ್ತೀರಾ? ಎಂಬ ಮಾಧ್ಯಮದವರ ಪ್ರಶ್ನೆಗೆ, ಯಾರೇ ಬಂದು ಪ್ರಚಾರ ಮಾಡಿದರೂ ಸ್ವಾಗತಿಸುತ್ತೇನೆ ಎಂದು ತಿಳಿಸಿದರು.

ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶ ಇದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇವೆ. ನಮಗೆ ಗೆಲುವು ಮುಖ್ಯವಾಗಿರುವುದರಿಂದ ಯಾವುದೇ ಸಮಸ್ಯೆಇಲ್ಲ ಎಂದು ಸ್ಪಷ್ಟಪಡಿಸಿದರು.

ನಾನು ಇವತ್ತು ನಾಳೆ ದಾವಣಗೆರೆಯಲ್ಲಿ ಪ್ರಚಾರ ಮಾಡುತ್ತೇನೆ. ಏಪ್ರಿಲ್ 5, 6ರಂದು ಬಾಗಲಕೋಟೆಯಲ್ಲಿ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಪ್ರಚಾರಕ್ಕೆ ಹೋಗುವೆ. ನನಗೆ ನೂರಕ್ಕೆ ನೂರು ವಿಶ್ವಾಸ ಇದೆ. ಎರಡೂ ಕಡೆಯೂ ದೊಡ್ಡ ಅಂತರದಲ್ಲಿ ನಮ ಅಭ್ಯರ್ಥಿಗಳು ಗೆಲ್ಲಲ್ಲಿದ್ದಾರೆ ಎಂದರು. ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯಜನಹಿತ ಮರೆತು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಅಜೀರ್ಣವಾಗುವಷ್ಟು ಬಹುಮತ ಕಾಂಗ್ರೆಸ್‌ಗೆ ಈಗಾಗಲೇ ಇದೆ. ಮತ್ತೊಮೆ ಚುನಾವಣೆ ಗೆದ್ದರೆ ಅಧಿಕಾರ ಮದದಿಂದ ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಂತೆ ಆಗುತ್ತದೆ ಎಂದರು.

# ದಾವಣಗೆರೆ ದಕ್ಷಿಣದಲ್ಲಿ ದೊಡ್ಡ ಅಂತರದ ಗೆಲುವು: ಡಿಸಿಎಂ

ದಾವಣಗೆರೆ: "ದಿವಂಗತ ಶಾಮನೂರು ಶಿವಶಂಕರಪ್ಪ ನವರು ಮಾಡಿರುವ ಸೇವೆ, ಕೊಟ್ಟಿರುವ ಕೊಡುಗೆಗಳನ್ನು ಈ ಭಾಗದ ಜನ ಸ್ಮರಿಸುತ್ತಿದ್ದಾರೆ. ಈ ಬಾರಿಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ ಅವರು ದೊಡ್ಡ ಅಂತರದ ಗೆಲುವು ಸಾಧಿಸಲಿದ್ದಾರೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ದಾವಣೆಗೆರೆಯಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಮಂಗಳವಾರ ಪ್ರತಿಕ್ರಿಯೆ ನೀಡಿದರು.

ಎರಡು ಕ್ಷೇತ್ರಗಳಲ್ಲಿನ ಉಪಚುನಾವಣೆ ಪ್ರಚಾರದ ಬಗ್ಗೆ ಕೇಳಿದಾಗ, "ನಮ್ಮ ಮುಖ್ಯಮಂತ್ರಿಗಳು ಈಗಾಗಲೇ ಉಪಚುನಾವಣೆ ಕ್ಷೇತ್ರಗಳಲ್ಲಿ ಪ್ರಚಾರ ಆರಂಭಿಸಿದ್ದಾರೆ. ನಮ್ಮ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಪಕ್ಷ ಯಾರಿಗೆ ಎಲ್ಲಿ ಪ್ರಚಾರ ಮಾಡಲು ಜವಾಬ್ದಾರಿ ನಿಡಿದೆಯೋ ಆಯಾ ನಾಯಕರು ಅಲ್ಲಿ ಪ್ರಚಾರನಿರತರಾಗಿದ್ದಾರೆ. ನಾನು ಅಸ್ಸಾಂನಲ್ಲಿ ಎರಡು ದಿನ ಪ್ರಚಾರ ಮುಗಿಸಿ ಇಲ್ಲಿಗೆ ಬಂದಿದ್ದೇನೆ. ಇಂದು ದಾವಣಗೆರೆ, ನಾಳೆ ಬಾಗಲಕೋಟೆಯಲ್ಲಿ ಪ್ರಚಾರ ಮಾಡುತ್ತೇವೆ. ನಂತರ ಮತ್ತೆ ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ಪ್ರಚಾರ ಮಾಡುತ್ತೇವೆ. ಈ ಮಧ್ಯೆ ಎರಡು ದಿನ ಕೇರಳಕ್ಕೆ ಹಾಗೂ ಒಂದು ದಿನ ಅಸ್ಸಾಂಗೆ ಹೋಗಿ ಪ್ರಚಾರ ಮಾಡುತ್ತೇನೆ" ಎಂದು ಹೇಳಿದರು.



"ನಾವು ಎಲ್ಲಾ ಗೊಂದಲಗಳಿಗೆ ತೆರೆ ಎಳೆದಿದ್ದು, ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷ ಎಲ್ಲಾ ಸಮಾಜ, ಎಲ್ಲಾ ವರ್ಗಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದೆ. ಶಾಮನೂರು ಶಿವಶಂಕರಪ್ಪ ಅವರು ರಾಷ್ಟ್ರೀಯ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾಗಿದ್ದವರು. ಅವರ ಕೊಡುಗೆ ಅಪಾರವಾಗಿದೆ. ನಾನು ಇಲ್ಲಿ ಪ್ರತ್ಯೇಕ ಸಮೀಕ್ಷೆ ಮಾಡಿಸಿದ್ದು, ಕೋವಿಡ್ ಸಮಯದಲ್ಲಿ ಶಾಮನೂರು ಶಿವಶಂಕರಪ್ಪನವರು ಮಾಡಿದ ಸಹಾಯ, ಸಹಕಾರವನ್ನು ಜನ ಸ್ಮರಿಸುತ್ತಿದ್ದಾರೆ. ವಿದ್ಯಾ ಕ್ಷೇತ್ರದಲ್ಲಿ ಅವರು ನೀಡಿರುವ ಸೇವೆಯನ್ನು ನೆನೆಯುತ್ತಿದ್ದಾರೆ" ಎಂದರು.

"ಸಾವಿರಾರು ಜನ ಹೊರಗಡೆಯಿಂದ ಬಂದು ಇಲ್ಲಿ ಶಿಕ್ಷಣ ಪಡೆಯುವಂತೆ ಮಾಡಿರುವವರು ಶಿವಶಂಕರಪ್ಪನವರು. ಅವರಿಂದ ಈ ಜಿಲ್ಲೆ ಪ್ರಸಿದ್ಧವಾಗಿದೆ. ಅವರ ಕುಟುಂಬಕ್ಕೆ ಶಕ್ತಿ ತುಂಬಲು ಜನ ತೀರ್ಮಾನಿಸಿದ್ದಾರೆ. 79% ಜನ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಮಾಡುವುದಾಗಿ ಹೇಳಿದ್ದು, ಇದು ಬಹಳ ಸಂತೋಷದ ವಿಚಾರ. ನಮ್ಮ ಗ್ಯಾರಂಟಿಗಳು ಕ್ಷೇತ್ರದ ಮನೆ ಮನೆಗೂ ತಲುಪಿವೆ. 59 ಸಾವಿರ ಬಡ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ತಲುಪುತ್ತಿದೆ. 1.40 ಲಕ್ಷ ಜನರಿಗೆ ಅನ್ನ ಭಾಗ್ಯ ಯೋಜನೆ, 59 ಸಾವಿರ ಮನೆಗಳಿಗೆ ಉಚಿತ ವಿದ್ಯುತ್ ಸಿಗುತ್ತಿದೆ. ಮಹಿಳೆಯರು ಬಸ್ ನಲ್ಲಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ" ಎಂದು ವಿವರಿಸಿದರು.

"ಗ್ಯಾಸ್, ಪೆಟ್ರೋಲ್, ಡೀಸೆಲ್, ಕಬ್ಬಿಣ, ಸೀಮೆಂಟ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಇನ್ನು ಮುಂದೆಯೂ ಏರಿಕೆಯಾಗಲಿದೆ. ಈ ಬೆಲೆ ಏರಿಕೆಯಿಂದ ಜನರನ್ನು ರಕ್ಷಣೆ ಮಾಡಲು ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ನಮ್ಮ ಈ ಯೋಜನೆ ಮಹತ್ವ ಈಗ ಅರಿವಾಗುತ್ತಿದೆ" ಎಂದರು.

ಪ್ರಚಾರಕ್ಕೆ ಸಚಿವ ಜಮೀರ್ ಅಹ್ಮದ್ ಅವರು ಬರುತ್ತಾರಾ ಎಂದು ಕೇಳಿದಾಗ, "ಪಕ್ಷ ಜಮೀರ್ ಅವರಿಗೆ ಕೇರಳ ಚುನಾವಣೆ ಪ್ರಚಾರದ ಜವಾಬ್ದಾರಿ ನೀಡಿದ್ದು, ಅದನ್ನು ಮುಗಿಸಿಕೊಳ್ಳುತ್ತಾರೆ. ಇನ್ನುಳಿದ ಅಲ್ಪಸಂಖ್ಯಾತ ನಾಯಕರಿಗೂ ನಾವು ಚುನಾವಣಾ ಪ್ರಚಾರದ ಜವಾಬ್ದಾರಿ ವಹಿಸಿದ್ದೇವೆ" ಎಂದರು.

ಜಮೀರ್ ಅವರಿಗೆ ಅಸಮಾಧಾನವಿದೆ ಎಂದು ಕೇಳಿದಾಗ, "ಒಬ್ಬ ವ್ಯಕ್ತಿ ಮೇಲೆ ಪಕ್ಷ ನಡೆಯುವುದಿಲ್ಲ. ಡಿ.ಕೆ. ಶಿವಕುಮಾರ್ ಮೇಲೂ ನಡೆಯುವುದಿಲ್ಲ, ಸಿದ್ದರಾಮಯ್ಯ ಅವರ ಮೇಲೂ ನಡೆಯುವುದಿಲ್ಲ, ಜಮೀರ್ ಅವರ ಮೇಲೂ ನಡೆಯುವುದಿಲ್ಲ. ಪಕ್ಷವು ಸಿದ್ಧಾಂತ ಹಾಗೂ ಕಾರ್ಯಕರ್ತರ ಮೇಲೆ ನಡೆಯುತ್ತದೆ. ಚುನಾವಣೆಯಲ್ಲಿ ನಾವು ಮೊದಲಿನಿಂದಲೂ ಕೆಲಸ ಮಾಡಿಕೊಂಡು ಬಂದಿದ್ದೇವೆ.

ಅಲ್ಪಸಂಖ್ಯಾತರಿಗೆ ನಾವು ಕೊಟ್ಟಿರುವ ಕೊಡುಗೆಯನ್ನು ಬಿಜೆಪಿಯವರು ಮುಸ್ಲಿಂ ಓಲೈಕೆ ಎಂದು ಟೀಕೆ ಮಾಡುತ್ತಿದೆ. ಇದು ಮುಸಲ್ಮಾನರ ಪಕ್ಷ ಎಂದು ಅವರು ಟೀಕೆ ಮಾಡುತ್ತಾರೆ. ಅಲ್ಪಸಂಖ್ಯಾತರನ್ನು ರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದಲೇ ನಾವು ಈ ಭಾಗದ ಜಬ್ಬಾರ್ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನವನ್ನು ನೀಡಿದ್ದೇವೆ.

ಶಿಗ್ಗಾಂವ್ ಕ್ಷೇತ್ರದವರಿಗೂ ಸ್ಥಾನ ನೀಡಿದ್ದು, 16 ನಿಗಮ ಮಂಡಳಿ ಅಧ್ಯಕ್ಷ ಸ್ಥಾನವನ್ನು ಅಲ್ಪಸಂಖ್ಯಾತರಿಗೆ ನೀಡಲಾಗಿದೆ" ಎಂದು ವಿವರಿಸಿದರು.

# ಉಪ ಚುನಾವಣೆ ನಾಮಪತ್ರ ವಿವಾದ: ಅರ್ಜಿ ವಜಾ

ಬೆಂಗಳೂರು: ಚುನಾವಣಾ ಆಯೋಗದ ಡಿಜಿಟಲ್ ನಾಮಪತ್ರ ವ್ಯವಸ್ಥೆ ವಿಫಲತೆಯಿಂದಾಗಿ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವುದು ವಿಳಂಬವಾಗಿರುವುದನ್ನು ಪರಿಗಣಿಸದೇ ಭೌತಿಕವಾಗಿ ನಾಮಪತ್ರ ಸಲ್ಲಿಸಿರುವುದನ್ನು ಪರಿಗಣಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸುವಂತೆ ಕೋರಿದ್ದ ಅರ್ಜಿಯೊಂದನ್ನು ಹೈಕೋರ್ಟ್ ಈಚೆಗೆ ವಜಾಗೊಳಿಸಿದೆ.

ಬೆಂಗಳೂರಿನ ಇಂದಿರಾ ನಗರದ ಎ ಆಲಂ ಪಾಷಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ.

ನೋಟರಿ ಮಾಡಿಸಲ್ಪಟ್ಟಿರುವ ಫಾರ್ಮ್ 26 ಅಫಿಡವಿಟ್ ಒಳಗೊಂಡ ಭೌತಿಕ ನಾಮಪತ್ರವನ್ನು ಪರಿಗಣಿಸಲು ಭಾರತೀಯ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿ ಮತ್ತು ದಾವಣಗೆರೆ ಚುನಾವಣಾಧಿಕಾರಿಗೆ ನಿರ್ದೇಶನ ಕೋರಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಚುನಾವಣಾ ಆಯೋಗದ ಸುವಿದಾ ಪೋರ್ಟಲ್ ಮೂಲಕ ನಾಮಪತ್ರ ಸಲ್ಲಿಸಿ, ಭದ್ರತಾ ಠೇವಣಿ ಪಾವತಿಸಲು ಸಾಧ್ಯವಾಗದೇ ಇರುವುದರಿಂದ ನಿಗದಿತ ಅವಧಿಯಲ್ಲಿ ಉಮೇದುವಾರಿಕೆ ಸಲ್ಲಿಕೆ ಸಾಧ್ಯವಾಗಿಲ್ಲ. ಆಯೋಗದ ಆಡಳಿತಾತ್ಮಕ ವೈಫಲ್ಯದಿಂದ ಸಮಸ್ಯೆ ತಲೆದೋರಿದ್ದು, ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ತಮ್ಮ ನಾಮಪತ್ರ ಪರಿಗಣಿಸಲು ಚುನಾವಣಾಧಿಕಾರಿಗೆ ನಿರ್ದೇಶಿಸಬೇಕು ಎಂದು ಆಲಂ ಪಾಷಾ ಮಾಡಿದ್ದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.





ಬೆಂಗಳೂರು: ನಗರದ ಶಿಕ್ಷಣ ಸಂಸ್ಥೆಯಾದ "WOW KIDS CHIGURU" ವತಿಯಿಂದ 2026ರ ವಾರ್ಷಿಕೋತ್ಸವವನ್ನು "Jungle Jamboree" ಎಂಬ ವಿನೂತನ ಥೀಮ್‌ನಲ್ಲಿ ಅದ್ದೂರಿಯಾಗಿ ಆಯೋಜಿಸಲಾಯಿತು. ಮಕ್ಕಳ ಪ್ರತಿಭೆಯನ್ನು ಅನಾವರಣಗೊಳಿಸುವ ಉದ್ದೇಶದಿಂದ ನಡೆದ ಈ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಮನಸೆಳೆದವು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಧ್ಯಮ ಕ್ಷೇತ್ರದ ಹಿರಿಯರು ಹಾಗೂ ನಿರ್ಮಾಪಕರಾದ ಗಂಡಸಿ ಸದಾನಂದ ಸ್ವಾಮಿ ಮತ್ತು ಖ್ಯಾತ ದೈಹಿಕ ಶಿಕ್ಷಣ ನಿರ್ದೇಶಕರಾದ ಆರ್. ಸುರೇಶ್ ಭಾಗವಹಿಸಿದ್ದರು. ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳ ಪ್ರತಿಭೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲಾ ಆಡಳಿತ ಮಂಡಳಿ ಮುಖ್ಯ ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸಿ, ಅವರ ಸಾನ್ನಿಧ್ಯ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತಂದಿದೆ ಎಂದು ತಿಳಿಸಿತು. ಮಕ್ಕಳ ಸೃಜನಾತ್ಮಕತೆ, ನೃತ್ಯ, ನಾಟಕ ಹಾಗೂ ವಿವಿಧ ಕಲಾ ಪ್ರದರ್ಶನಗಳು ಕಾರ್ಯಕ್ರಮದ ವಿಶೇಷವಾಗಿದ್ದವು. ಈ ವಾರ್ಷಿಕೋತ್ಸವವು "ಜಂಗಲ್ ಜ್ಯಾಂಬೋರಿ" ಥೀಮ್ ಮೂಲಕ ಪ್ರಕೃತಿ ಪ್ರೀತಿ ಮತ್ತು ಪರಿಸರ ಸಂರಕ್ಷಣೆ ಕುರಿತ ಸಂದೇಶವನ್ನು ಸಾರುವಲ್ಲಿ ಯಶಸ್ವಿಯಾಯಿತು.

# 'ವಿದ್ಯಾರ್ಥಿಗಳು ಸೇವಾ ಮನೋಭಾವ ರೂಢಿಸಿಕೊಳ್ಳಬೇಕು'

ಬೆಂಗಳೂರು

ವಿದ್ಯಾರ್ಥಿ ವೇತನ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉನ್ನತ ಸ್ಥಾನಗಳಿಗೆ ಏರಿದ ಮೇಲೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡಬೇಕು ಎಂದು ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟಿ ಟ್ರಸ್ಟ್‌ನ ಹಿರಿಯ ಟ್ರಸ್ಟಿ ಸಕಲ ಶರತ್ ಕುಮಾರ್ ಹೇಳಿದರು. ಬಸವನಗುಡಿಯ ನ್ಯಾಷನಲ್ ಕಾಲೇಜು, ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟಿ ಟ್ರಸ್ಟ್‌ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ನಾವು ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಈ ವಿದ್ಯಾರ್ಥಿ ವೇತನ ನೀಡುತ್ತಿದ್ದೇವೆ. ಇದು ಸದ್ಬಳಕೆಯಾಗಬೇಕು. ಯಾವುದೇ ಕಾರಣಕ್ಕೂ ವ್ಯರ್ಥ ಮಾಡಿಕೊಳ್ಳಬೇಡಿ.

ಈ ಧನಸಹಾಯದಿಂದ ಓದಿದ ವಿದ್ಯಾರ್ಥಿಗಳು ಮುಂದೆ ಉನ್ನತ ಸ್ಥಾನಕ್ಕೆ ಹೋದ ಮೇಲೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡುವ ಮನೋಭಾವ ರೂಢಿಸಿಕೊಳ್ಳಬೇಕು" ಎಂದರು.



"ದೇವತಾ ಶ್ರೀರಾಮಯ್ಯ ಚೆಟ್ಟಿ ಅವರು ಬಡಕುಟುಂಬದಿಂದ ಬಂದವರು. ರಸ್ತೆಗಳಲ್ಲಿ ತಿರುಗಾಟ ನಡೆಸಿ ವ್ಯಾಪಾರ ಮಾಡಿದವರು. ಹಂತ ಹಂತವಾಗಿ ಮೇಲೆ ಬಂದರು. ಅವರ ವ್ಯಾಪಾರದ ಶೈಲಿ ಇತರರಿಗೂ ಮಾದರಿಯಾಗಲಿದೆ. ವಿದ್ಯಾರ್ಥಿಗಳು ಚೆನ್ನಾಗಿ ಓದಿ ಭವಿಷ್ಯದಲ್ಲಿ ಉನ್ನತ ಸ್ಥಾನವನ್ನು ಪಡೆಯುವಂತೆ" ಶುಭ ಹಾರೈಸಿದರು. ದೇವತಾ ಫ್ಯಾಬ್ರಿಕ್ಸ್‌ನ ಸಹಮಾಲೀಕ ದೇವತಾ ಪ್ರದೀಪ್ ಮಾತನಾಡಿ, "ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟಿವತಿಯಿಂದ ಹಾಸ್ಟೆಲ್ ನಿರ್ಮಾಣ ಮಾಡಿದ್ದಾರೆ. ನಾವು ಪದವಿಗೆ ಮಾತ್ರ ವಿದ್ಯಾರ್ಥಿ ವೇತನ ನೀಡುವುದಿಲ್ಲ. ನೀವು ಇದನ್ನು ಸದ್ಬಳಕೆ ಮಾಡಿಕೊಂಡು ಓದಿ, ಹೆಚ್ಚಿನ ಅಂಕಗಳಿಸಿದರೆ, ಮುಂದಿನ ವ್ಯಾಸಂಗಕ್ಕೂ ನಾವು ಧನ ಸಹಾಯ ಮಾಡುತ್ತೇವೆ. ನಿಮ್ಮ ಪೋಕಸ್ ಓದಿನ ಕಡೆ ಇರಬೇಕು" ಎಂದರು. ನ್ಯಾಷನಲ್ ಎಜುಕೇಷನ್ ಸೊಸೈಟಿ(ಎನ್‌ಇಎಸ್) ಗೌರವ ಕಾರ್ಯದರ್ಶಿ ವಿ.ವೆಂಕಟಶಿವರೆಡ್ಡಿ ಮಾತನಾಡಿ, "ನಮ್ಮಲ್ಲಿ ಪ್ರವೇಶ ಪಡೆಯುವ ಬಹುತೇಕ ವಿದ್ಯಾರ್ಥಿಗಳು ಬಡ ಕುಟುಂಬದ ಹಿನ್ನೆಲೆಯಿಂದ ಬಂದಿದವರಾಗಿದ್ದಾರೆ. ಆರ್ಥಿಕ ಸಹಾಯ ಇರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಈ ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಿದ್ದೇವೆ. ಇದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಲಿದೆ. ದೇವತಾ ಕುಟುಂಬ ಸದಸ್ಯರು ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿರುವುದು ಬಹಳ ಖುಷಿ ತಂದಿದೆ" ಎಂದರು.

# ವಾರ್ಷಿಕ ಐಟಿ ಕ್ವಿಜ್ ಟಿಸಿಎಸ್ ಟೆಕ್–ಬೈಟ್ಸ್‌ಗೆ ನೋಂದಣಿ ಆರಂಭ

ಬೆಂಗಳೂರು

ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕವಾಗಿ ಮುಂಚೂಣಿಯಲ್ಲಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆಯಾದ 'ಬೋರ್ಡ್ ಫಾರ್ ಐಟಿ ಎಜುಕೇಶನ್ ಸ್ಟ್ಯಾಂಡರ್ಡ್ಸ್' (ಬೈಟ್ಸ್) ಜಂಟಿಯಾಗಿ ಆಯೋಜಿಸುವ ಪ್ರತಿಷ್ಠಿತ ಎಂಜಿನಿಯರಿಂಗ್ ಐಟಿ ಕ್ವಿಜ್ 'ಟಿಸಿಎಸ್ ಟೆಕ್–ಬೈಟ್ಸ್' ನ 17ನೇ ಆವೃತ್ತಿಗೆ ಚಾಲನೆ ನೀಡಲಾಗಿದೆ. ಈ ಕ್ವಿಜ್ ಗೆ ಅಧಿಕೃತವಾಗಿ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ರಾಜ್ಯದ ಎಂಜಿನಿಯರಿಂಗ್ ವಿದ್ಯಾರ್ಥಿಗಳು (ಬಿಇ/ ಬಿಟೆಕ್) ತಮ್ಮ ತಾಂತ್ರಿಕ ಜ್ಞಾನ ಪ್ರದರ್ಶಿಸಬಹುದು. ಕಳೆದ 16 ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಾ ಬಂದಿರುವ ಈ ಕ್ವಿಜ್, ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಟ್ರೆಂಡ್ ಗಳು ಮತ್ತು ಕೈಗಾರಿಕಾ ಅನ್ವಯಗಳ ಕುರಿತು ಜಾಗೃತಿ ಮೂಡಿಸುವ ಗುರಿ ಹೊಂದಿದೆ. ಇಂದಿನ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಆಧಾರಿತ ಉದ್ಯಮದಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಈ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿದೆ. ವಿನೂತನ ತಾಂತ್ರಿಕ ಕ್ಷೇತ್ರಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಆ ಮೂಲಕ ಇಂದಿನ ವೇಗವಾಗಿ ಬೆಳೆಯುತ್ತಿರುವ, ತಂತ್ರಜ್ಞಾನ ಆಧರಿತ ಉದ್ಯಮದಲ್ಲಿ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಸ್ಪರ್ಧಿಸಲು ಶಕ್ತರನ್ನಾಗಿಸುವುದು ಇದರ ಉದ್ದೇಶವಾಗಿದೆ. ಪ್ರತಿ ಶಿಕ್ಷಣ ಸಂಸ್ಥೆಯು ಕ್ವಿಜ್ ನ ಪ್ರಾದೇಶಿಕ ಹಂತದ ಫೈನಲ್ ನಲ್ಲಿ ಭಾಗವಹಿಸಲು 10 ತಂಡಗಳನ್ನು (ಪ್ರತಿ ತಂಡದಲ್ಲಿ 2 ವಿದ್ಯಾರ್ಥಿಗಳು) ಕಳುಹಿಸಬಹುದು. ಯಾವುದೇ ಭಾಗವಹಿಸುವಿಕೆ ಶುಲ್ಕ ಇರುವುದಿಲ್ಲ. ಪ್ರವೇಶ ಪತ್ರಗಳನ್ನು ಆಯಾ ಸಂಸ್ಥೆಗಳು ಏಪ್ರಿಲ್ 13, 2026 ರಂದು ಅಥವಾ ಅದಕ್ಕೂ ಮೊದಲು manager@bites.org.in ಗೆ ಕಳುಹಿಸಬೇಕು.

# ಸೆಲೆಬ್ರಿಟಿ ಥ್ರೋಬಾಲ್–ವಾಲಿಬಾಲ್ ಟೂರ್ನಮೆಂಟ್‌ಗೆ ಆರೋಗ್ಯ ಸಚಿವರಿಂದ ಉದ್ಘಾಟನೆ



ಬೆಂಗಳೂರು

ನಗರದ ಬಿಸಿಯು ಬೇಸ್ ಕ್ಯಾಂಪ್, ಗಾಂಧಿನಗರದಲ್ಲಿ ಮನಸೆಳೆಯುವ ರೀತಿಯಲ್ಲಿ ಆಯೋಜಿಸಲಾದ "ಸೆಲೆಬ್ರಿಟಿ ಥ್ರೋಬಾಲ್ ಮತ್ತು ವಾಲಿಬಾಲ್ ಟೂರ್ನಮೆಂಟ್"ಗೆ ಮಾನ್ಯ ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಟ, ನಿರ್ಮಾಪಕರಾದ ಗಂಡಸಿ ಸದಾನಂದ ಸ್ವಾಮಿ ಭಾಗವಹಿಸಿ ಕ್ರೀಡಾಪಟುಗಳಿಗೆ ಶುಭಾಶಯ ಕೋರಿದರು. ಟೂರ್ನಮೆಂಟ್ ಡೈರೆಕ್ಟರ್ ಕೆ.ಎಂ. ನಟರಾಜ್, ಫೌಂಡರ್ ರೂಪಾ ಗೌಡ ಹಾಗೂ ಸಿಇಒ ಕಿರಣ್ ಗೌಡ ಅವರ ನೇತೃತ್ವದಲ್ಲಿ ಈ ಕ್ರೀಡಾ ಹಬ್ಬ ಯಶಸ್ವಿಯಾಗಿ ಆಯೋಜಿಸಲಾಯಿತು.

ಕಿರುತೆರೆ, ರಿಯಾಲಿಟಿ ಶೋ ಹಾಗೂ Bigg Boss Kannada ನಲ್ಲಿ ಕಾಣಿಸಿಕೊಂಡ ಅನೇಕ ಕಲಾವಿದರು ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸಿ ಕ್ರೀಡಾ ಕೌಶಲ್ಯ ಪ್ರದರ್ಶಿಸಿದರು. ಥ್ರೋಬಾಲ್ ಮತ್ತು ವಾಲಿಬಾಲ್ ಪಂದ್ಯಗಳು ಉತ್ಸಾಹಭರಿತವಾಗಿ ನಡೆದಿದ್ದು, ಪ್ರೇಕ್ಷಕರ ಮನ ಗೆದ್ದವು.

ಈ ಕಾರ್ಯಕ್ರಮವು ಕ್ರೀಡೆ ಮತ್ತು ಮನರಂಜನೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಮೂಲಕ ಯುವಜನತೆಗೆ ಪ್ರೇರಣೆಯಾಯಿತು.



ಪುದುಚೇರಿಯ ಮುತ್ಯಾಲಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ರಾಜೇಂದ್ರನ್ ರವರ ಪರವಾಗಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದ ದಿನೇಶ್ ಗುಂಡೂರಾವ್ ಎಐಸಿಸಿ ಕಾರ್ಯದರ್ಶಿಗಳಾದ ಅಂಜಲಿ ಅಂಬಾಲ್ಕರ್, ಕಾರ್ಯಕರ್ತರು ಹಾಗೂ ಸ್ಥಳೀಯರು ಭಾಗವಹಿಸಿದರು.


# ವಿಶ್ವ ರಂಗಭೂಮಿ ದಿನಾಚರಣೆಯನ್ನು ಪ್ರೇರಣಾದಾಯಕ ಪ್ರದರ್ಶನಗಳೊಂದಿಗೆ ಸಮರ್ಥನಂ ಆಚರಣೆ

ಬೆಂಗಳೂರು

ಸಮರ್ಥನಂ ಟ್ರಸ್ಟ್ ಫಾರ್ ದ ಡಿಸೇಬಲ್ಡ್‌ನ ಪ್ರದರ್ಶನ ಕಲೆ ವಿಭಾಗವಾದ ಸಮರ್ಥನಂ ಇನ್ಸ್ಟಿಟ್ಯೂಟ್ ಆಫ್ ಮ್ಯೂಸಿಕ್ & ಪರ್ಫಾರ್ಮಿಂಗ್ ಆರ್ಟ್ಸ್ (SIMPA) ವತಿಯಿಂದ World Theatre Day ಅನ್ನು ಸಮರ್ಥನಂ ಆರ್ಟ್ಸ್ ಸೆಂಟರ್‌ನಲ್ಲಿ ವೈವಿಧ್ಯಮಯ ಪ್ರತಿಭೆ, ಸೃಜನಶೀಲತೆ ಮತ್ತು ಸಮಾವೇಶಾತ್ಮಕತೆಯೊಂದಿಗೆ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಆಡಿ. Mahantesh G. Kivadasannavar, ಸಮರ್ಥನಂ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿ ಹಾಗೂ SIMPA ನಿರ್ದೇಶಕರು ಅಧ್ಯಕ್ಷತೆ ವಹಿಸಿದರು. SIMPA ಪ್ರಾಂಶುಪಾಲರಾದ Anusha ಕೂಡ ಉಪಸ್ಥಿತರಿದ್ದರು. ವಿಶೇಷ ಅತಿಥಿಗಳಾಗಿ ಆಡಿ. Nagesh V Bettakote, ಮೈಸೂರು ಕೆಎಸ್ಜಿಎಚ್ ಮ್ಯೂಸಿಕ್ & ಪರ್ಫಾರ್ಮಿಂಗ್ ಆರ್ಟ್ಸ್ ಮಾಜಿ ಉಪಕುಲಪತಿ, ಮತ್ತು ನಟಿ, ನಿರ್ದೇಶಕಿ ಹಾಗೂ ನಿರ್ಮಾಪಕಿ Sunetra Pandit ಭಾಗವಹಿಸಿದ್ದರು.

ಸಂಜೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಮನಮುಟ್ಟುವ ರಂಗಭೂಮಿ ಪ್ರದರ್ಶನಗಳು ನಡೆದವು. "Golden Fish" ನಾಟಕವು ಮುಖ್ಯ ಆಕರ್ಷಣೆಯಾಗಿ ಹೊರಹೊಮ್ಮಿತು. ದೃಷ್ಟಿದೋಷ ಹೊಂದಿರುವ ವಿದ್ಯಾರ್ಥಿಗಳಿಂದ ಪ್ರದರ್ಶಿಸಲಾದ Yakshagana ಯಕ್ಷಗಾನ ಪ್ರದರ್ಶನವು ವಿಶೇಷ ಮೆರುಗು ನೀಡಿದ್ದು, ಅವರ ಅಪಾರ ಪ್ರತಿಭೆ ಮತ್ತು ಸಮರ್ಪಣೆಯನ್ನು ತೋರಿಸಿತು.



ಈ ಕಾರ್ಯಕ್ರಮವು ಪ್ರತಿಭೆಗೆ ಯಾವುದೇ ಅಡ್ಡಿಗಳು ಇಲ್ಲವೆಂಬ SIMPAಯ ದೃಷ್ಟಿಯನ್ನು ಮತ್ತೊಮ್ಮೆ ಪ್ರತಿಪಾದಿಸಿತು.

ಡಾ. ನಾಗೇಶ್ ಅವರು ಹೇಳಿದರು: "ಸಮರ್ಥನಂ ಗಮನಾರ್ಹವಾಗಿ ಅಭಿವೃದ್ಧಿಯಾಗಿದೆ. ಇದರ ಸ್ಪಷ್ಟ ದೃಷ್ಟಿಕೋನ ಮತ್ತು ಸಮಾವೇಶದ ಬದ್ಧತೆ ವಿಶೇಷವಾಗಿದೆ. ಇದು ಜಾಗತಿಕ ವಿಶ್ವವಿದ್ಯಾಲಯ ಸ್ಥಾಪಿಸುವ ಸಾಮರ್ಥ್ಯವನ್ನು ಹೊಂದಿದ್ದು, ಸಮಾವೇಶಾತ್ಮಕ ಪ್ರದರ್ಶನ ಕಲೆಗಳ ಶಿಕ್ಷಣದಲ್ಲಿ ಮುಂಚೂಣಿಯಲ್ಲಿರಬಹುದು."

ಸುನೇತ್ರ ಪಂಡಿತ್ ಅವರು ಹೇಳಿದರು: "ಇಲ್ಲಿನ ಪ್ರತಿಭೆ ಮತ್ತು ಪ್ರದರ್ಶನಗಳ ಆಳ ನನಗೆ ತುಂಬಾ ಮೆಚ್ಚುಗೆ ಮೂಡಿಸಿದೆ. ಈ ಕಲಾವಿದರು ಜಾಗತಿಕ ವೇದಿಕೆಯಲ್ಲಿ ಗುರುತಿಸಿಕೊಂಡು ಬೆಳೆಯುವುದನ್ನು ನೋಡಲು ನಾನು ಎದುರುನೋಡುತ್ತಿದ್ದೇನೆ."

# 'ಕ್ರಿಯಾ ಯೋಗ ಪಾಠಗಳ ಬಿಡುಗಡೆ

ಬೆಂಗಳೂರು

ಯೋಗದ ಸತ್ಸಂಗ ಸೊಸೈಟಿ ಆಫ್ ಇಂಡಿಯಾ, ಯೋಗದ ಸತ್ಸಂಗ ಕ್ರಿಯಾ ಯೋಗ ಪಾಠಗಳನ್ನು ಕನ್ನಡ ಭಾಷೆಯಲ್ಲಿ ಆರಂಭಿಸಿದೆ. ವಿಶ್ವವಿಖ್ಯಾತ ಯೋಗಿಗಳಾದ ಶ್ರೀ ಶ್ರೀ ಪರಮಹಂಸ ಯೋಗಾನಂದರು ಬೋಧಿಸಿದ ವೈಜ್ಞಾನಿಕ ಧ್ಯಾನ ತಂತ್ರಗಳು ಹಾಗೂ ಯಶಸ್ವಿ ಜೀವನವನ್ನು ಸಾಧಿಸುವ ಸಿದ್ಧಾಂತಗಳು ಈ ಪಾಠಗಳಲ್ಲಿ ಅಂತರ್ಗತವಾಗಿದೆ. ಇದರ ಮೂಲಕ ಪ್ರಾಚೀನ ಯೋಗ ಧ್ಯಾನದ ಬೋಧನೆಗಳನ್ನು ಕನ್ನಡ ಭಾಷಾಭಿಮಾನಿ ಸಾಧಕರಿಗೆ ಅವರ ಮಾತೃಭಾಷೆಯಲ್ಲೇ ಸುಲಭವಾಗಿ ಲಭ್ಯವಾಗುವಂತೆ ಮಾಡಲಾಗಿದೆ. ಬೆಂಗಳೂರಿನ ಯೋಗದ ಧ್ಯಾನ ಕೇಂದ್ರದಲ್ಲಿ, ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಭಕ್ತರು ಮತ್ತು ಆತ್ಮಸಾಧಕರು ಸೇರಿಕೊಂಡು ಯೋಗದ ಸತ್ಸಂಗ ಪಾಠಗಳಲ್ಲಿ ನೀಡಿರುವ ಧ್ಯಾನ ಮತ್ತು ಸಮತೋಲನಯುತ ಜೀವನದ ಬೋಧನೆಗಳ ಬಗ್ಗೆ ತಿಳಿದುಕೊಂಡರು. ಈ ವಾರದ ಆರಂಭದಲ್ಲೇ, ಈ ಪಾಠಗಳನ್ನು ಕರ್ನಾಟಕದ ಹಾಸನ ಮತ್ತು ಧಾರವಾಡ ಜಿಲ್ಲೆಗಳಲ್ಲಿಯೂ ಬಿಡುಗಡೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಸ್ವಾಮಿ ಸ್ಮರಣಾನಂದ ಗಿರಿಯವರು (ಹಿರಿಯ ಸಂನ್ಯಾಸಿ ಮತ್ತು ಉಪಾಧ್ಯಕ್ಷರು) ಸ್ಪಷ್ಟ ಮತ್ತು ಕ್ರಮಬದ್ಧ ವಿಧಾನದಲ್ಲಿ ಧ್ಯಾನವನ್ನು ಕಲಿಯುವ ಮಹತ್ವವನ್ನು ಒತ್ತಿಹೇಳಿದರು. ಇಂದಿನ ಜಗತಿನಲ್ಲಿರುವ ಮಾನಸಿಕ ಒತ್ತಡ ಮತ್ತು ಅಶಾಂತಿಯ ವಾತಾವರಣದಲ್ಲಿ, ಇಂತಹ ಧ್ಯಾನದ ತಂತ್ರಗಳು ಅತ್ಯಾವಶ್ಯಕವಾಗಿವೆ. ಮಕ್ಕಳು, ಹಿರಿಯವರು ಹಾಗು ಯಾವುದೇ ಮತಗಳ ಅಡ್ಡಿ ಇಲ್ಲದ ಈ ಪ್ರಾಚೀನ ಯೋಗ ತಂತ್ರಗಳು ವೈಜ್ಯಾನಿಕವಾಗಿ ಮನಸನ್ನು ನಿಯಂತ್ರಿಸಿ, ಜೀವನದಲ್ಲಿ ಶಾಂತಿ, ಸೌಹಾರ್ದತೆ, ಸಂತೋಷ, ಏಕಾಗ್ರತೆ ಹಾಗು ಸಮಾಧಾನಗಳನ್ನು ಪಡೆಯುವ ಮಾರ್ಗವಾಗಿದೆ. ಮನಸ್ಸಿನ ಏಕಾಗ್ರತೆ ಹಾಗು ಶಾಂತಿಯೊಂದಿಗೆ ಮಾನವ ಎಲ್ಲಾ ಕಾರ್ಯಗಳಲ್ಲಿ ಯಶಸ್ಸನ್ನು ಸಾಧ್ಧಿಸಬಲ್ಲ ಎಂದು ಹೇಳಿದರು. ಅವರುಹೇಳಿದರು: "ಧ್ಯಾನ ಮಾಡುವ ವಿಧಾನವನ್ನು ಯಾರಿಗಾದರೂ ತಿಳಿದಿದ್ದರೆ, ಪ್ರತಿಯೊಬ್ಬರೂ ಧ್ಯಾನ ಮಾಡುತ್ತಿದ್ದರು! ಯೋಗದ ಸತ್ಸಂಗ ಪಾಠಗಳು ವೈಜ್ಞಾನಿಕ ಸ್ವಭಾವದ, ಚೆನ್ನಾಗಿ ಪರೀಕ್ಷಿಸಲ್ಪಟ್ಟ ಮತ್ತು ಖಚಿತ ಫಲಿತಾಂಶಗಳನ್ನು ನೀಡುವ ಧ್ಯಾನ ತಂತ್ರಗಳನ್ನು ಅತ್ಯಂತ ವಿವರವಾಗಿ ವಿವರಿಸುತ್ತವೆ. ಯೋಗದ ಸತ್ಸಂಗ ಪಾಠಗಳು ಹಂತ ಹಂತವಾಗಿ ಕಲಿಸುವ ಗೃಹ–ಅಧ್ಯಯನ ಕೋರ್ಸ್ ಆಗಿದೆ. ಪರಮಹಂಸ ಯೋಗಾನಂದರು ಬೋಧಿಸಿದ ಪ್ರಾಯೋಗಿಕ ಧ್ಯಾನ ವಿಧಾನಗಳು ಮತ್ತು ಜೀವನದ ಸಾಮರಸ್ಯಕರ ಮಾರ್ಗಗಳನ್ನು ಈ ಪಾಠಗಳಲ್ಲಿ ಎಲ್ಲಾ ಸಾಧಕರು ಕಲಿಯಬಹುದು. ಸತ್ಯಸಂಧರಾದ ಸಾಧಕರಿಗೆ ಏಕಾಗ್ರತೆ, ಆಂತರಿಕ ಶಾಂತಿ, ತೃಪ್ತಿ, ಆತ್ಮಜಾಗೃತಿ, ಈಶ್ವರನ ಸಾನಿಧ್ಯ ಮತ್ತು ಯಶಸ್ವಿ ಜೀವನವನ್ನು ಪಡೆಯುವ ಮಾರ್ಗದರ್ಶನ ಸಿಗುತ್ತದೆ. ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗಲೂ ಸಹ, ಈ ಪಾಠಗಳನ್ನು ಅಭ್ಯಾಸ ಮಾಡಬಹುದು.

# 'ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತವಾಗಬಾರದು'

ಬೆಂಗಳೂರು

ಮಹಿಳೆಯರು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗಬಾರದು. ದೇಶದ ರಕ್ಷಣೆಯ ಬಗ್ಗೆಯೂ ಆಲೋಚಿಸಬೇಕು. ದೇಶದ ರಕ್ಷಣೆ ನಮ್ಮೆಲ್ಲರ ಹೊಣೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕೆಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮತ್ತು ವಿಜ್ಞಾನಿ ಡಾ.ಶುಭ ವಿ. ಅಯ್ಯಂಗಾರ್ ಹೇಳಿದರು. ಬಸವನಗುಡಿಯ ನ್ಯಾಷನಲ್ ಕಾಲೇಜು ಬಸವನಗುಡಿಯ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ "ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ" ಉದ್ಘಾಟಿಸಿ ಮಾತನಾಡಿದ ಅವರು, "ಮಹಿಳೆ ಎಂದರೆ, ತಾತ್ಸಾರ ಬೇಡ. ಮಹಿಳೆಯು ಪುರುಷರಷ್ಟೇ ಸರಿ ಸಮನಾಗಿ ದುಡಿಯುವ ಶಕ್ತಿಯನ್ನು ಹೊಂದಿದ್ದಾರೆ. ಸಮಾಜದಲ್ಲಿ ನಾವು ಅವರನ್ನು ಸಮನಾಗಿ ಕಾಣಬೇಕಿದೆ. ವಿದ್ಯಾರ್ಥಿಗಳು ದೇಶ ಪ್ರೇಮ ಇಟ್ಟುಕೊಳ್ಳಬೇಕು. ದೇಶ ರಕ್ಷಣೆ ನಮ್ಮ ಹೊಣೆ ಎಂಬುದನ್ನು ಅರಿಯಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ಸೃಜನಶೀಲತೆ, ಪರಿಶ್ರಮ ಮತ್ತು ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳಬೇಕು" ಎಂದರು. "ಕೇಂದ್ರ ಬಾಹ್ಯಕಾಶ ಪ್ರಯೋಗಾಲಯ(ಎನ್‌ಎಎಲ್) ರನ್ ವೇ ಸ್ಪಷ್ಟವಾಗಿ ಕಾಣುವಂತೆ ಮಾಡುವುದಕ್ಕಾಗಿ "ದೃಷ್ಟಿ" ಎಂಬ ತಂತ್ರಾಂಶವನ್ನು ರೂಪಿಸಲಾಗಿದೆ.



ಇದು ನನ್ನ ಅಧ್ಯಕ್ಷತೆಯಲ್ಲಿ ತಯಾರಿಸಿದ ಸಾಫ್ಟ್‌ವೇರ್ ಆಗಿದ್ದು, ಇದರಿಂದ ಪೈಲೈಟ್‌ಗಳಿಗೆ ವಿಮಾನಗಳನ್ನು ಸುರಕ್ಷಿತವಾಗಿ ಲ್ಯಾಂಡ್ ಮಾಡಲು ಅನುಕೂಲವಾಗಿದೆ. ಆಪರೇಷನ್ ಸಿಂಧೂರ್ ವೇಳೆಯಲ್ಲೂ ನಮ್ಮ ತಂತ್ರಾಂಶ ಬಳಕೆ ಮಾಡಲಾಗಿದೆ. ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದ ಸಾಫ್ಟ್‌ವೇರ್ ವೆಚ್ಚಕ್ಕಿಂತ ಕಡಿಮೆ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಇಂದು ನೂರಕ್ಕೂ ಹೆಚ್ಚಿನ ವಿಮಾನ ನಿಲ್ದಾಣಗಳಲ್ಲಿ ನಮ್ಮ ತಂತ್ರಾಂಶ ಬಳಕೆ ಮಾಡುತ್ತಿದ್ದಾರೆ" ಎಂದರು. ನ್ಯಾಷನಲ್ ಎಜುಕೇಷನ್ ಸೊಸೈಟಿ(ಎನ್‌ಇಎಸ್) ಗೌರವ ಕಾರ್ಯದರ್ಶಿ ವಿ.ವೆಂಕಟಶಿವರೆಡ್ಡಿ ಮಾತನಾಡಿ, "ನ್ಯಾಷನಲ್ ಕಾಲೇಜು ಹಂತ ಹಂತವಾಗಿ ಬೆಳೆಯುತ್ತಿದೆ. ಇದು ಹಲವಾರು ವಿಜ್ಞಾನಿಗಳನ್ನು ಹುಟ್ಟುಹಾಕಿದೆ. ಶುಭ ಅವರು ಸಹ ನಮ್ಮ ಕಾಲೇಜಿನ ಹಳೇ ವಿದ್ಯಾರ್ಥಿ ಎಂದು ಹೇಳುವುದಕ್ಕೆ ಹೆಮ್ಮೆ ಆಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಕಲ್ಪಿಸುವ ಉದ್ದೇಶದಿಂದ ಕಾಲೇಜು ಅಭಿವೃದ್ಧಿ ಮಾಡಲಾಗಿದೆ. ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು" ಎಂದರು.





ಬೆಂಗಳೂರು: ಶ್ರೀರಾಮನವಮಿ ಅಂಗವಾಗಿ ಸಂಚಾರಿ ಚಾಲಕರ ಸೇವಾ ಟ್ರಸ್ಟ್ ವತಿಯಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಭಕ್ತರಿಗೆ ಪಾನಕ, ಮಜ್ಜಿಗೆ ಹಾಗೂ ಕೋಸಂಬರಿ ವಿತರಿಸುವ ಸೇವಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಶ್ರೀರಾಮನವಮಿ ಪೂಜೆಯನ್ನು ಭಕ್ತಿಭಾವದಿಂದ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷರಾದ ಗಂಡಸಿ ಸದಾನಂದ ಸ್ವಾಮಿ, ಸಂಸ್ಥಾಪಕ ಅಧ್ಯಕ್ಷರಾದ ಸಂಚಾರಿ ಸತೀಶ್, ಹಿರಿಯ ರಂಗಭೂಮಿ ಹಾಗೂ ಚಲನಚಿತ್ರ ನಟ ಡಿಂಗ್ರಿ ನಾಗರಾಜ್, ಪುಷ್ಪ ಸ್ವಾಮಿ, ಎಸ್ಕಾರ್ಟ್ ಶ್ರೀನಿವಾಸ್, ನವನೀತಂ ಮತ್ತು ಆಡುಗೋಡಿ ಶ್ರೀನಿವಾಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಚಾರಿ ಚಾಲಕರ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳಾದ ವಿನಯ್, ಮಂಜೇಗೌಡ, ರಮೇಶ್, ರವಿ, ಅಪ್ಪು ಸೋಮಶೇಖರ್,ಪ್ರಕಾಶ್ ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

01/04/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER



## ಬೆಂಗಳೂರಿನಲ್ಲಿ ಉಚಿತ 'ಸೇಫ್ ಸ್ಪೇಸ್ ಸ್ಟುಡಿಯೋಸ್'




ಬೆಂಗಳೂರು

ವೇಗವಾಗಿ ಬೆಳೆಯುತ್ತಿರುವ ಕ್ರಿಯೇಟರ್ ಆರ್ಥಿಕತೆಯನ್ನು ಗಮನದಲ್ಲಿಟ್ಟುಕೊಂಡು, ವಿಷಯ ರಚನೆಕಾರರಿಗಾಗಿ ವಿಶೇಷ 'ಸೇಫ್ ಸ್ಪೇಸ್ ಸ್ಟುಡಿಯೋಸ್' ಉಪಕ್ರಮವನ್ನು ನೀಲ್ಕಮಲ್ ಹೋಮ್ಸ್ ಆರಂಭಿಸಿದೆ. ಸ್ವತಂತ್ರ ಪ್ರಭಾವಿಗಳು, ವ್ಲಾಗರ್‌ಗಳು ಮತ್ತು ಡಿಜಿಟಲ್ ಕಥೆಗಾರರು ಉತ್ತಮ ಗುಣಮಟ್ಟದ ವೀಡಿಯೊಗಳು ಹಾಗೂ ಡಿಜಿಟಲ್ ವಿಷಯವನ್ನು ಸೃಷ್ಟಿಸಲು ವೃತ್ತಿಪರ ಹಾಗೂ ಆಕರ್ಷಕ ಸ್ಥಳಗಳ ಅಗತ್ಯವನ್ನು ಎದುರಿಸುತ್ತಿದ್ದಾರೆ. ಆದರೆ, ಪ್ರೀಮಿಯಂ ಸ್ಟುಡಿಯೋಗಳು ಮತ್ತು ಚಿತ್ರೀಕರಣ ಸ್ಥಳಗಳು ದುಬಾರಿಯಾಗಿರುವುದರಿಂದ ಉದಯೋನ್ಮುಖ ವಿಷಯ ರಚನೆಕಾರರಿಗೆ ಅವುಗಳನ್ನು ಬಳಸುವುದು ಕಷ್ಟಕರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನೀಲ್ಕಮಲ್ ಹೋಮ್ಸ್ ತನ್ನ ನೀಲ್ಕಮಲ್ ಹೋಮ್ಸ್ ಮಾರತ್ತಹಳ್ಳಿ ಶೋರೂಮ್ ಅನ್ನು ಉಚಿತ ಚಿತ್ರೀಕರಣ ಸ್ಥಳವಾಗಿ ಪರಿವರ್ತಿಸಿದೆ. ಪ್ರತಿ ಮಂಗಳವಾರ ಮತ್ತು ಗುರುವಾರ ರಾತ್ರಿ 10 ಗಂಟೆಯಿಂದ ಬೆಳಗಿನ ಜಾವ 2 ಗಂಟೆಯವರೆಗೆ ಈ ಶೋರೂಮ್ ವಿಷಯ ರಚನೆಕಾರರಿಗೆ ಉಚಿತ ಸ್ಟುಡಿಯೋ ಆಗಿ ಲಭ್ಯವಿರುತ್ತದೆ. ಈ ಅವಧಿಯಲ್ಲಿ ಶೋರೂಮ್‌ನಲ್ಲಿರುವ ಸುಂದರವಾಗಿ ವಿನ್ಯಾಸಗೊಳಿಸಲಾದ ಒಳಾಂಗಣಗಳನ್ನು ವೀಡಿಯೊಗಳು, ರೀಲ್ಸ್, ಪಾಡ್‌ಕಾಸ್ಟ್‌ಗಳು ಹಾಗೂ ಇತರ ಡಿಜಿಟಲ್ ವಿಷಯಗಳ ಚಿತ್ರೀಕರಣಕ್ಕೆ ಬಳಸಿಕೊಳ್ಳಬಹುದು. ಶೋರೂಮ್‌ನಲ್ಲಿ ಮಲಗುವ ಕೋಣೆ, ವಾಸದ ಕೋಣೆ, ಸೋಫಾ ಸೆಟ್, ಗೃಹ ಅಲಂಕಾರ ಸೇರಿದಂತೆ ವಿವಿಧ ರೀತಿಯ ಒಳಾಂಗಣ ವಿನ್ಯಾಸಗಳನ್ನು ಸಿದ್ಧಪಡಿಸಲಾಗಿದೆ. ಪ್ರತಿಯೊಂದು ವಲಯವೂ ವಿಭಿನ್ನ ಶೈಲಿಯ ವಿಷಯ ಸೃಷ್ಟಿಗೆ ಅನುಕೂಲವಾಗುವಂತೆ ರೂಪಿಸಲಾಗಿದೆ. ಇದರಿಂದ ವಿಷಯ ರಚನೆಕಾರರಿಗೆ ಸಾಮಾನ್ಯ ಸ್ಟುಡಿಯೋಗಳಲ್ಲಿ ಸಿಗದಷ್ಟು ಸೃಜನಾತ್ಮಕ ಸ್ವಾತಂತ್ರ್ಯ ದೊರೆಯಲಿದೆ. ಹಗಲಿನ ವೇಳೆ ಈ ಸ್ಥಳವು ಗೃಹೋಪಕರಣಗಳ ಶೋರೂಮ್ ಆಗಿ ಕಾರ್ಯನಿರ್ವಹಿಸಿದರೆ, ರಾತ್ರಿ ಹೊತ್ತಿಗೆ ಅದು ಕ್ರಿಯೇಟರ್‌ಗಳಿಗಾಗಿ ಆಧುನಿಕ ಸ್ಟುಡಿಯೋ ಆಗಿ ಪರಿವರ್ತನೆಯಾಗುತ್ತದೆ. ಇದರಿಂದ ಕಡಿಮೆ ವೆಚ್ಚದಲ್ಲಿ ಅಥವಾ ಉಚಿತವಾಗಿ ಉತ್ತಮ ಗುಣಮಟ್ಟದ ವಿಷಯ ಸೃಷ್ಟಿಸಲು ಬಯಸುವ ಯುವಕರಿಗೆ ಇದು ನೆರವಾಗಲಿದೆ.

## ಕಲ್ಲುಗೋಪಹಳ್ಳಿ ಸರಕಾರಿ ಶಾಲೆ ಕಟ್ಟಡ ಈಗ ಕುಡುಕರ ಅಡ್ಡೆ

ರಾಮನಗರ

ತಾಲ್ಲೂಕಿನ ಕಲ್ಲುಗೋಪಹಳ್ಳಿಯಲ್ಲಿ ನಿರ್ಮಾಣ ಹಂತದಲ್ಲಿರುವ ಸರಕಾರಿ ಶಾಲೆ ಕಟ್ಟಡ ಕುಡುಕರ ಅಡ್ಡೆಯಾಗಿದ್ದು, ಉದ್ಘಾಟನೆಗೂ ಮುನ್ನವೇ ಅಕ್ರಮ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ.

ಬಿಡದಿ ಪುರಸಭೆ 1ನೇ ವಾರ್ಡ್ ವ್ಯಾಪ್ತಿಯ ಕಲ್ಲುಗೋಪಹಳ್ಳಿ ಗ್ರಾಮದಲ್ಲಿ 86 ಲಕ್ಷ ರೂ. ವೆಚ್ಚದಲ್ಲಿ ಹೊಸದಾಗಿ ಸರಕಾರಿ ಶಾಲೆ ಕಟ್ಟಡ ನಿರ್ಮಿಸಲಾಗಿದ್ದು, ನೀರು, ವಿದ್ಯುತ್ ಸಂಪರ್ಕ ಹಾಗೂ ಕಾಂಪೌಂಡ್ ಕಾಮಗಾರಿ ಮಾತ್ರ ಬಾಕಿ ಉಳಿದಿದೆ. ಅನುದಾನ ಕೊರತೆಯ ಕಾರಣ ಬಾಕಿ ಕೆಲಸ ಹಾಗೂ ಉದ್ಘಾಟನೆ ಕಾರ್ಯಕ್ರಮ ವಿಳಂಬವಾಗಿದೆ ಎಂದು ಹೇಳಲಾಗುತ್ತಿದೆ.

ನೂತನ ಶಾಲಾ ಕಟ್ಟಡ ಕಾಂಪೌಂಡ್ ಇಲ್ಲದ ಕಾರಣಕ್ಕೆ ಸೋಮಾರಿಗಳು ಹಾಗೂ ಮದ್ಯವ್ಯಸನಿಗಳಿಗೆ ಆಶ್ರಯತಾಣವಾಗಿದೆ. ಇಲ್ಲಿ ಯಾರ ತಂಟೆ ತಕರಾರಿಲ್ಲದ ಕಾರಣ ಬೆಳಗಾಗುತ್ತಿದ್ದಂತೆ ಕಂಠಪೂರ್ತಿ ಕುಡಿದು ಕಟ್ಟಡದಲ್ಲಿ ಮೆಟ್ಟಿಲುಗಳು ಹಾಗೂ ವರಾಂಡದಲ್ಲಿ ನಿದ್ರೆಗೆ ಜಾರುತ್ತಾರೆ. ಸಂಜೆಯಾದರೆ ಮದ್ಯಪಾನದ ಜತೆಗೆ ಶಾಲಾ ಕಟ್ಟಡದ ಒಳಗೆ ಮತ್ತು ಮೆಟ್ಟಿಲುಗಳ ಮೇಲೆ ಮದ್ಯದ ಖಾಲಿ ಪ್ಯಾಕೆಟ್‌ಗಳು ರಾಶಿ ಬಿದ್ದಿವೆ. ಪ್ರತಿದಿನ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದರೂ ಸಹ ಇಲ್ಲಿ ಹೇಳೋರು ಕೇಳೋರು ಯಾರೂ ಇಲ್ಲದಂತಾಗಿದೆ. ರಾಜಾರೋಷವಾಗಿ ನಡೆಯುವ ಅನೈತಿಕ ಚಟುವಟಿಕೆಗಳಿಗೆ ಸಂಬಂಧಪಟ್ಟವರು ಇನ್ನಾದರೂ ಕಡಿವಾಣ ಹಾಕಬೇಕೆಂಬುದು ಗ್ರಾಮಸ್ಥರ ಆಗ್ರಹವಾಗಿದೆ.



## ರಂಗಭೂಮಿ ಶಾಂತಿಯನ್ನು ಬಯಸುತ್ತದೆ: ಡಾ.ಸಿ.ಬಸವಲಿಂಗಯ್ಯ

ಬಳ್ಳಾರಿ

ವಿಶ್ವದೆಲ್ಲೆಡೆ ಶಾಂತಿಯನ್ನು ಬಯಸುವುದು ರಂಗಭೂಮಿಯ ಮುಖ್ಯ ಧ್ಯೇಯವಾಗಿದೆ ಎಂದು ಮೈಸೂರಿನ ರಂಗ ನಿರ್ದೇಶಕರಾದ ಡಾ. ಸಿ. ಬಸಲಿಂಗಯ್ಯ ಹೇಳಿದರು.

ಇಲ್ಲಿಯ ಡಾ. ಬಿ.ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ವಿವಿಯ ಪ್ರದರ್ಶನ ಕಲೆ ಮತ್ತು ನಾಟಕ ವಿಭಾಗದ ವತಿಯಿಂದ ವಿಶ್ವ ರಂಗಭೂಮಿ ದಿನಾಚರಣೆ-2026 ಪ್ರಯುಕ್ತ ಆಯೋಜಿಸಿದ್ದ "ಕೃತಕ ಬುದ್ಧಿಮತ್ತೆಯ ಯುಗದಲ್ಲಿ ರಂಗಭೂಮಿಯ ಉಳಿವಿನ ಸವಾಲುಗಳು" ಒಂದು ದಿನದ



ರಾಷ್ಟ್ರೀಯ ವಿಚಾರ ಸಂಕಿರ್ಣ ಕಾರ್ಯಕ್ರಮವನ್ನು ಸಾಂಕ್ರಿಟಿಸ್ ನಾಟಕದ ದೃಶ್ಯ ಮಾಡುವ ಹಾಗೂ ಜಂಬೆ ಭಾರಿಸುವ ಮೂಲಕ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ರಂಗಭೂಮಿ ಒಂದು ಮುಕ್ತ ವಿಶ್ವವಿದ್ಯಾಲಯವಾಗಿದ್ದು, ರಂಗಭೂಮಿಗೆ ಅಳಿವಿಲ್ಲ. ಅದು ಕಲೆಗಳ ಸಾರವನ್ನು ಹೊಂದಿದೆ. ಜೀವನದ ಮೇಲೆ ಆಳವಾದ ಪ್ರಭಾವ ಬೀರುವಂತಹದ್ದು. ಆದಿ ಕವಿ ಪಂಪ, ಅಲ್ಲಮಪ್ರಭು, ಬುದ್ಧ, ರಾಮ, ಸೀತೆ ಅಕ್ಕಮಹಾದೇವಿ, ಬಸವಣ್ಣನವರ ಕುರಿತಾದ ವಿಚಾರಗಳನ್ನು ವ್ಯಕ್ತಪಡಿಸಿದರು. ಜೀವನದಲ್ಲಿ ಫೇಲಾದವರೆ ಮಹಾನ್ ವ್ಯಕ್ತಿಗಳಾಗಿದ್ದಾರೆ.

## ತಿಪಟೂರು ಡಿವೈಎಸ್‌ಪಿ ಎಂ.ಹೆಚ್. ಉಮೇಶ್‌ಗೆ ಮುಖ್ಯಮಂತ್ರಿ ಪದಕದ ಗರಿ

ತಿಪಟೂರು



ನಗರದ ಪೊಲೀಸ್ ಉಪ ವಿಭಾಗದಲ್ಲಿ ಡಿವೈಎಸ್‌ಪಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಂ.ಹೆಚ್. ಉಮೇಶ್ ಅವರು ತಮ್ಮ ಅತ್ಯುತ್ತಮ ಸೇವೆಗಾಗಿ 2025ನೇ ಸಾಲಿನ ಪ್ರತಿಷ್ಠಿತ 'ಮುಖ್ಯಮಂತ್ರಿ ಪದಕ'ಕ್ಕೆ ಆಯ್ಕೆಯಾಗಿದ್ದಾರೆ.

ಪುರಸ್ಕೃತ ಅಧಿಕಾರಿ ಎಂ.ಹೆಚ್. ಉಮೇಶ್ ಅವರು ಈ ಹಿಂದೆ ಬೆಂಗಳೂರಿನ ಸಿಐಡಿ ಕಚೇರಿಯಲ್ಲಿ ಡಿವೈಎಸ್‌ಪಿಯಾಗಿ ಸುದೀರ್ಘ ಸೇವೆ ಸಲ್ಲಿಸಿದ್ದರು.

ಈ ಅವಧಿಯಲ್ಲಿ ಅತ್ಯಂತ ಜಟಿಲವಾದ ಹಲವಾರು ಪ್ರಕರಣಗಳನ್ನು ಭೇದಿಸುವ ಮೂಲಕ ಇಲಾಖೆಯಲ್ಲಿ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಎಂದು ಹೆಸರು ಮಾಡಿದ್ದರು.

ಅವರ ಈ ಸಮಾಜಮುಖಿ ಕಾರ್ಯವೈಖರಿಯನ್ನು ಪರಿಗಣಿಸಿ ಸರ್ಕಾರ ಈ ಗೌರವಕ್ಕೆ ಆಯ್ಕೆ ಮಾಡಿದೆ.

ಕೆಲವೇ ದಿನಗಳ ಹಿಂದಷ್ಟೇ ವರ್ಗಾವಣೆಗೊಂಡು ತಿಪಟೂರು ಉಪ ವಿಭಾಗದ ಜವಾಬ್ದಾರಿ ವಹಿಸಿಕೊಂಡಿರುವ ಉಮೇಶ್ ಅವರಿಗೆ ಈ ಗೌರವ ಸಂದಿರುವುದು ಸ್ಥಳೀಯ ಪೊಲೀಸ್ ವಲಯದಲ್ಲಿ ಸಂಭ್ರಮ ತಂದಿದೆ. ಪದಕ ಲಭಿಸಿದ ಹಿನ್ನೆಲೆಯಲ್ಲಿ ಉಪ ವಿಭಾಗದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ತಾಲ್ಲೂಕಿನ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗಣ್ಯರು ಅವರಿಗೆ ಆತ್ಮೀಯವಾಗಿ ಅಭಿನಂದನೆ ಸಲ್ಲಿಸಿದ್ದಾರೆ.

## ಸಿಲಿಂಡರ್ ಇಲ್ಲದೆ ಇಂದಿರಾ ಕ್ಯಾಂಟೀನ್ ಕಂಗಾಲು: ಸೌದೆ ಒಲೆಯೇ ಗತಿ!

ವಿಜಯಪುರ

ವಾಣಿಜ್ಯ ಸಿಲಿಂಡರ್‌ಗಳ ತೀವ್ರ ಕೊರತೆಯಿಂದಾಗಿ ಪಟ್ಟಣದ ಇಂದಿರಾ ಕ್ಯಾಂಟೀನ್ ಸಂಕಷ್ಟಕ್ಕೆ ಸಿಲುಕಿದೆ. ಕಳೆದ ಒಂದು ವಾರದಿಂದ ಸಿಲಿಂಡರ್ ಪೂರೈಕೆಯಾಗದ ಹಿನ್ನೆಲೆಯಲ್ಲಿ, ಅನಿವಾರ್ಯವಾಗಿ ಸೌದೆ ಒಲೆ ಬಳಸಿ ಅಡುಗೆ ತಯಾರಿಸಲಾಗುತ್ತಿದ್ದು, ಸಿಬ್ಬಂದಿ ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ.




**6 ಸಾವಿರ ನೀಡಿ ಸೌದೆ ಖರೀದಿ!**

ವಾಣಿಜ್ಯ ಸಿಲಿಂಡರ್‌ಗಳು ಸಿಗದ ಕಾರಣ ಕ್ಯಾಂಟೀನ್ ಸಿಬ್ಬಂದಿ 6 ಸಾವಿರ ರೂ. ನೀಡಿ ಒಂದು ಲೋಡ್ ಸೌದೆ ಖರೀದಿಸಿದ್ದಾರೆ. ಪಟ್ಟಣದ ಕಟ್ಟಡ ಕಾರ್ಮಿಕರು, ಹಮಾಲಿಗಳು ಸೇರಿದಂತೆ ಸಾವಿರಾರು ಬಡ ಕೂಲಿ ಕಾರ್ಮಿಕರು ಪ್ರತಿನಿತ್ಯ ಈ ಕ್ಯಾಂಟೀನ್ ನಂಬಿಕೊಂಡಿದ್ದಾರೆ. ನಿಗದಿತ ಸಮಯಕ್ಕೆ ತಿಂಡಿ ಮತ್ತು ಊಟ ಸಿದ್ಧಪಡಿಸಬೇಕಾದ ಒತ್ತಡದಲ್ಲಿರುವ ಕೇವಲ ಮೂವರು ಸಿಬ್ಬಂದಿ, ಸೌದೆ ಒಲೆಯ ಮುಂದೆ ಹಗಲಿರುಳು ಶ್ರಮಿಸುತ್ತಿದ್ದಾರೆ.

**ಬಿಸಿಲು ಮತ್ತು ಹೊಗೆಯ ಅಗ್ನಿಪರೀಕ್ಷೆ:**

ಅಡುಗೆ ತಯಾರಿಸುವ ಜಾಗದಲ್ಲಿ ಮೇಲ್ಛಾವಣಿ ಇಲ್ಲದಿರುವುದು ಸಿಬ್ಬಂದಿಯ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ. "ಸುಡುವ ಬಿಸಿಲಿನಲ್ಲಿ ನಿಂತು, ಸೌದೆಯ ಹೊಗೆಯ ನಡುವೆ ಅಡುಗೆ ಮಾಡುವುದರಿಂದ ಕಣ್ಣುಗಳು ಉರಿಯುತ್ತಿವೆ. ಸಿಲಿಂಡರ್ ಇಲ್ಲದ ಕಾರಣ ಚಪಾತಿ ಮಿಷನ್ ಕೆಲಸ ಮಾಡುತ್ತಿಲ್ಲ, ಹೀಗಾಗಿ ಹೊರಗಿನಿಂದ ರೆಡಿಮೇಡ್ ಚಪಾತಿ ತರಿಸಿ ನೀಡುತ್ತಿದ್ದೇವೆ," ಎಂದು ಅಡುಗೆ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

> ಗ್ರಾಹಕರಿಗೆ ಸರಿಯಾದ ಸಮಯಕ್ಕೆ ಆಹಾರ ತಯಾರಿಸುವುದು ಕಷ್ಟವಾಗುತ್ತಿದೆ. ನಾವು, 4200 ರೂಪಾಯಿಗೆ ಒಂದು ಸಿಲಿಂಡರ್ ಖರೀದಿಸಿಕೊಂಡು ಬಂದು ಅಡುಗೆ ತಯಾರಿಸುತ್ತಿದ್ದೇವು. ಈಗ ಸಿಲಿಂಡರ್ ಸಿಗುತ್ತಿಲ್ಲ. ನಮಗೂ ಊಟವಿಲ್ಲದೆ, ಹೊರಗೆ ಹೋಗಿ ಹೊಟೇಲ್ ನಲ್ಲಿ ಊಟ ಮಾಡಿದ್ದೇವೆ.
>
> - ಚನ್ನಬಸವ ಅಡುಗೆ ತಯಾರಕ
> ಇಂದಿರಾ ಕ್ಯಾಂಟೀನ್

**ಶಾಲಾ ಮಕ್ಕಳಿಗೂ ಹೊಗೆಯ ಕಾಟ:**


ಕ್ಯಾಂಟೀನ್ ಸುತ್ತಮುತ್ತಲಿರುವ ಶಾಲೆಗಳ ನೂರಾರು ವಿದ್ಯಾರ್ಥಿಗಳಿಗೂ ಸೌದೆ ಒಲೆಯ ಹೊಗೆಯಿಂದ ಉಸಿರಾಟದ ತೊಂದರೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ಒಣ ಸೌದೆ ಸಿಗದೆ, ಹಸಿ ಸೌದೆಯನ್ನೇ ಬಳಸುತ್ತಿರುವುದರಿಂದ ಅಡುಗೆ ತಯಾರಿಕೆ ತಡವಾಗುತ್ತಿದೆ. ಇದರಿಂದಾಗಿ ಗ್ರಾಹಕರ ಆಕ್ರೋಶಕ್ಕೂ ಸಿಬ್ಬಂದಿ ಗುರಿಯಾಗುತ್ತಿದ್ದಾರೆ.

**ಸೌಲಭ್ಯಗಳ ಕೊರತೆ ನೀಗಿಸಿ:**

"ನಾವು ರಾತ್ರಿ 10 ಗಂಟೆಯವರೆಗೂ ಸೇವೆ ಸಲ್ಲಿಸುತ್ತಿದ್ದೇವೆ. ಹಸಿ ಸೌದೆಯಿಂದ ಅಡುಗೆ ತಡವಾಗುತ್ತಿರುವುದಕ್ಕೆ ಸಾರ್ವಜನಿಕರು ಸಹಕರಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ವಾಣಿಜ್ಯ ಸಿಲಿಂಡರ್ ಪೂರೈಕೆಗೆ ಕ್ರಮ ಕೈಗೊಳ್ಳಬೇಕು," ಎಂದು ಕ್ಯಾಂಟೀನ್ ಸಿಬ್ಬಂದಿ ಮನವಿ ಮಾಡಿದ್ದಾರೆ.

ಬೆಂಗಳೂರು

## 50 ಕೋಟಿ ಬಳಕೆದಾರರ ಮೈಲಿಗಲ್ಲು ದಾಟಿದ ಟ್ರೂಕಾಲರ್




ಭಾರತವನ್ನು ಕೇಂದ್ರವಾಗಿಸಿಕೊಂಡು ಬೆಳೆಯುತ್ತಿರುವ ಸುರಕ್ಷಿತ ಮತ್ತು ವಿಶ್ವಾಸಾರ್ಹ ಸಂವಹನ ವೇದಿಕೆಯಾದ ಟ್ರೂಕಾಲರ್ ಜಾಗತಿಕವಾಗಿ 500 ಮಿಲಿಯನ್ ಅಂದರೆ 50 ಕೋಟಿ ಬಳಕೆದಾರರ ಮೈಲಿಗಲ್ಲು ದಾಟಿರುವುದಾಗಿ ಘೋಷಿಸಿದೆ. ಕಂಪನಿಯ ಪ್ರಕಾರ, 2025ರಲ್ಲೇ ಟ್ರೂಕಾಲರ್‌ಗೆ 5 ಕೋಟಿಗೂ ಹೆಚ್ಚು ಹೊಸ ಬಳಕೆದಾರರು ಸೇರ್ಪಡೆಯಾಗಿದ್ದಾರೆ. ಸ್ಪ್ಯಾಮ್ ಕರೆಗಳು, ವಂಚನೆ ಹಾಗೂ ಅನಗತ್ಯ ಸಂವಹನಗಳಿಂದ ರಕ್ಷಣೆ ಪಡೆಯುವ ಅಗತ್ಯವು ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವುದರಿಂದ ಬಳಕೆದಾರರ ಸಂಖ್ಯೆ ವೇಗವಾಗಿ ಏರಿಕೆಯಾಗಿದೆ.

ಪ್ರಸ್ತುತ ಭಾರತದಲ್ಲೇ ಟ್ರೂಕಾಲರ್‌ಗೆ 35 ಕೋಟಿ ಬಳಕೆದಾರರಿದ್ದು, ಉಳಿದ 15 ಕೋಟಿ ಬಳಕೆದಾರರು ಭಾರತದ ಹೊರಗಿನ ದೇಶಗಳಲ್ಲಿ ಇದ್ದಾರೆ. ಇದರೊಂದಿಗೆ, ಈ ವರ್ಷದ ಆರಂಭದಲ್ಲೇ ಟ್ರೂಕಾಲರ್ ಜಾಗತಿಕವಾಗಿ 40 ಲಕ್ಷ ಪಾವತಿಸುವ ಚಂದಾದಾರರನ್ನು ಕೂಡ ದಾಟಿದೆ. ಕಂಪನಿಯ ಆದಾಯ ಮೂಲವನ್ನು ಮತ್ತಷ್ಟು ಬಲಪಡಿಸಿದೆ. ಈ ಕುರಿತು ಮಾತನಾಡಿದ ಟ್ರೂಕಾಲರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿತ್ ಜುಂಜುನ್‌ವಾಲಾ, "50 ಕೋಟಿ ಬಳಕೆದಾರರನ್ನು ತಲುಪಿರುವುದು ನಮ್ಮ ಪಾಲಿಗೆ ಮಹತ್ವದ ಮೈಲಿಗಲ್ಲು. ಆದರೆ ಇದು ಇಂದಿನ ಜಗತ್ತಿನ ಒಂದು ದೊಡ್ಡ ಸತ್ಯವನ್ನೂ ಹೇಳುತ್ತದೆ. ಪ್ರತಿದಿನ ಹೆಚ್ಚಿನ ಸಂಖ್ಯೆಯ ಜನರು ಸ್ಪ್ಯಾಮ್, ವಂಚನೆ ಮತ್ತು ಅನಗತ್ಯ ಸಂವಹನಗಳಿಂದ ರಕ್ಷಣೆ ಪಡೆಯಲು ಸಹಾಯವನ್ನು ಬಯಸುತ್ತಿದ್ದಾರೆ. ಜನರು ಟ್ರೂಕಾಲರ್ ಮೇಲೆ ಇಟ್ಟಿರುವ ನಂಬಿಕೆಗೆ ಇದು ಸಾಕ್ಷಿಯಾಗಿದೆ" ಎಂದು ಹೇಳಿದರು. ಅವರು, "ಪ್ರತಿಯೊಂದು ಕರೆ ಅಥವಾ ಸಂದೇಶದ ಮೊದಲು, ಸಮಯದಲ್ಲಿ ಮತ್ತು ನಂತರ ಬಳಕೆದಾರರನ್ನು ರಕ್ಷಿಸುವ ಹೊಸ ತಂತ್ರಜ್ಞಾನ ಹಾಗೂ ಸ್ಮಾರ್ಟ್ ಸಾಮರ್ಥ್ಯಗಳನ್ನು ಟ್ರೂಕಾಲರ್‌ಗೆ ಸೇರಿಸುವುದನ್ನು ಮುಂದುವರಿಸುತ್ತೇವೆ. ಎಲ್ಲರಿಗೂ ಸುರಕ್ಷಿತ ಮತ್ತು ವಿಶ್ವಾಸಾರ್ಹ ಸಂವಹನ ವ್ಯವಸ್ಥೆಯನ್ನು ನಿರ್ಮಿಸುವುದು ನಮ್ಮ ಗುರಿ. ಈಗ ನಮ್ಮ ಮುಂದಿನ ಗುರಿ 100 ಕೋಟಿ ಬಳಕೆದಾರರನ್ನು ತಲುಪುವುದಾಗಿದೆ" ಎಂದು ತಿಳಿಸಿದರು. ಇಂದು ಟ್ರೂಕಾಲರ್ ಕೇವಲ ಕರೆ ಮಾಡುವವರನ್ನು ಗುರುತಿಸುವ ಅಪ್ಲಿಕೇಶನ್ ಆಗಿ ಉಳಿದಿಲ್ಲ. ಜನರು ಯಾರೊಂದಿಗೆ ಮಾತನಾಡುತ್ತಿದ್ದಾರೆ, ಕರೆ ಅಥವಾ ಸಂದೇಶ ನಂಬಿಕಸ್ಥವೇ ಎಂಬುದನ್ನು ತಿಳಿದುಕೊಳ್ಳಲು ಸಹಾಯ ಮಾಡುವ ವಿಶ್ವಾಸಾರ್ಹ ಡಿಜಿಟಲ್ ಸಾಧನವಾಗಿ ಇದು ರೂಪಾಂತರಗೊಂಡಿದೆ. ವಂಚನೆ ತಪ್ಪಿಸುವುದು, ಗುರುತು ಪರಿಶೀಲಿಸುವುದು ಮತ್ತು ಸುರಕ್ಷಿತ ಸಂವಹನ ನಡೆಸಲು ಇದು ದೈನಂದಿನ ಬದುಕಿನ ಅಗತ್ಯ ಭಾಗವಾಗಿ ಪರಿಣಮಿಸಿದೆ.

## ಸರಸ್ವತಿಪುರಂನಲ್ಲಿ ಹೊಸ ಶಾಖೆ ಉದ್ಘಾಟನೆ

ಮೈಸೂರು

ಭಾರತದ ಅತಿ ದೊಡ್ಡ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಆಗಿರುವ ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಕರ್ನಾಟಕದಲ್ಲಿ ತನ್ನ ವಿಸ್ತರಣೆಯ ಭಾಗವಾಗಿ ಬೆಂಗಳೂರು ಮತ್ತು ಮೈಸೂರಿನಲ್ಲಿ ವಿಶೇಷ ಗೋಲ್ಡ್ ಲೋನ್ ಶಾಖೆಗಳನ್ನು ಆರಂಭಿಸಿದೆ.

ಬೆಂಗಳೂರು ನಗರದ ವಿ.ವಿ.ಪುರಂ ಹಾಗೂ ಮೈಸೂರಿನ ಸರಸ್ವತಿಪುರಂ ಪ್ರದೇಶಗಳಲ್ಲಿ ಈ ಹೊಸ ಶಾಖೆಗಳು ಕಾರ್ಯಾರಂಭ ಮಾಡಿವೆ. ಮೈಸೂರಿನಲ್ಲಿ ಕಂಠರಾಜು ಅರಸ್ ರಸ್ತೆಯಲ್ಲಿರುವ ಸರಸ್ವತಿಪುರಂನಲ್ಲಿ ಹಾಗೂ ಬೆಂಗಳೂರಿನ ಬಸವನಗುಡಿ ಸಮೀಪದ ವಿ.ವಿ.ಪುರಂನಲ್ಲಿ ಶಾಖೆಗಳನ್ನು ಉದ್ಘಾಟಿಸಲಾಗಿದೆ.

ಬ್ಯಾಂಕಿನ ಪ್ರಕಾರ, ಕರ್ನಾಟಕವನ್ನು ಪ್ರಮುಖ ಮಾರುಕಟ್ಟೆಯಾಗಿ ಗುರುತಿಸಲಾಗಿದ್ದು, ಇಲ್ಲಿ ಬಂಗಾರದ ಮಾಲೀಕತ್ವದ ಬಲವಾದ ಪರಂಪರೆ, ಚುರುಕಾದ ಸ್ಥಳೀಯ ಆರ್ಥಿಕತೆ ಮತ್ತು ತ್ವರಿತ ಬಂಗಾರ ಆಧಾರಿತ ಸಾಲಗಳಿಗೆ ಹೆಚ್ಚುತ್ತಿರುವ ಬೇಡಿಕೆ ಇದೆ.

ಈ ಹೊಸ ಶಾಖೆಗಳ ಮೂಲಕ ಗ್ರಾಹಕರು ತಮ್ಮ




ಬಂಗಾರವನ್ನು ಅಡಮಾನ ಇಟ್ಟು ವೇಗವಾಗಿ ಮತ್ತು ಸುರಕ್ಷಿತವಾಗಿ ಸಾಲ ಪಡೆಯುವ ಅವಕಾಶವನ್ನು ಹೊಂದಲಿದ್ದಾರೆ. ಬ್ಯಾಂಕ್ ಅಧಿಕೃತ ಮತ್ತು ವಿಶ್ವಾಸಾರ್ಹ ಗೋಲ್ಡ್ ಲೋನ್ ಸೇವೆಯನ್ನು ನೀಡುವ ಮೂಲಕ ದಕ್ಷಿಣ ಭಾರತದಲ್ಲಿ ತನ್ನ ಪಾದಚಿಹ್ನೆಯನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದೆ.

ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಈಗಾಗಲೇ ತೆಲಂಗಾಣ, ತಮಿಳುನಾಡು ಹಾಗೂ ಗುಜರಾತ್ ರಾಜ್ಯಗಳಲ್ಲೂ ಹೊಸ ಗೋಲ್ಡ್ ಲೋನ್ ಶಾಖೆಗಳನ್ನು ಆರಂಭಿಸಿದೆ. ತೆಲಂಗಾಣದ ಪಾರ್ಕಲ್, ಹುಜುರಾಬಾದ್, ಖಮ್ಮಂ ಮತ್ತು ವೇಮುಲವಾಡ, ತಮಿಳುನಾಡಿನ ತಿರುಪ್ಪೂರ್ ಮತ್ತು ಪಲ್ಲವರಂ, ಗುಜರಾತ್‌ನ ಜಾಮ್‌ನಗರ ಮತ್ತು ಜುನಾಗಢ ಪ್ರದೇಶಗಳಲ್ಲಿ ಇತ್ತೀಚೆಗೆ ಶಾಖೆಗಳು ಆರಂಭಗೊಂಡಿವೆ.

## 26.33 ಕೋಟಿ ಸಂಗ್ರಹಿಸಿದ ಆರ್‌ಎನ್‌ಐಟಿ ಎಐ ಸೊಲ್ಯೂಷನ್ಸ್


ಬೆಂಗಳೂರು

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಹಾಗೂ ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಪಟ್ಟಿಮಾಡಿದ ಸಂಸ್ಥೆಯಾದ ಆರ್‌ಎನ್‌ಐಟಿ ಎಐ ಸೊಲ್ಯೂಷನ್ಸ್ ಲಿಮಿಟೆಡ್ ಸವಾಲಿನ ಮಾರುಕಟ್ಟೆ ಪರಿಸ್ಥಿತಿಗಳ ನಡುವೆಯೂ ಸುಮಾರು ರೂ.26.33 ಕೋಟಿ ಮೊತ್ತವನ್ನು ಯಶಸ್ವಿಯಾಗಿ ಸಂಗ್ರಹಿಸಿದೆ. ಕಂಪನಿಯು ಈ ಮೊತ್ತವನ್ನು ಈಕ್ವಿಟಿ ಷೇರುಗಳ ಆದ್ಯತೆಯ ಹಂಚಿಕೆಯ ಮೂಲಕ ಸಂಗ್ರಹಿಸಿದ್ದು, ಈ ಪ್ರಕ್ರಿಯೆಯನ್ನು ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಜೈಪುರ ಪೀಠವು ಸೆಪ್ಟೆಂಬರ್ 23, 2024ರಂದು ಅನುಮೋದಿಸಿದ ಪುನರ್‌ರಚನಾ ಯೋಜನೆಗೆ ಅನುಗುಣವಾಗಿ ಕೈಗೊಳ್ಳಲಾಗಿದೆ. ಹಂಚಿಕೆ ಪ್ರಕ್ರಿಯೆ ಅನ್ವಯವಾಗುವ ಭಾರತೀಯ ಷೇರುಪೇಟೆ ಮತ್ತು ವಿನಿಮಯ ಮಂಡಳಿ ನಿಯಮಗಳು, ಕಂಪನಿಗಳ ಕಾಯ್ದೆ-2013 ಮತ್ತು ಷೇರುಪೇಟೆ ಅವಶ್ಯಕತೆಗಳಿಗೆ ಅನುಗುಣವಾಗಿ ನಡೆದಿರುವುದಾಗಿ ಕಂಪನಿ ತಿಳಿಸಿದೆ. ಮಾರ್ಚ್ 28, 2026ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ, ಪ್ರತಿ ಷೇರಿಗೆ ರೂ.10 ಮುಖಬೆಲೆ ಹಾಗೂ ರೂ.40 ಪ್ರೀಮಿಯಂ ಸೇರಿ ಒಟ್ಟು ರೂ.50 ದರದಲ್ಲಿ 52,66,537 ಈಕ್ವಿಟಿ ಷೇರುಗಳನ್ನು ಸಾರ್ವಜನಿಕ ವರ್ಗದ ಕಾರ್ಯತಂತ್ರದ ಹೂಡಿಕೆದಾರರಿಗೆ ಹಂಚಿಕೆ ಮಾಡಲು ಅನುಮೋದನೆ ನೀಡಲಾಗಿದೆ. ಈ ಹಂಚಿಕೆಯಲ್ಲಿ ಪರ್ಯಾಯ ಹೂಡಿಕೆ ನಿಧಿಗಳು, ಕಾರ್ಯತಂತ್ರದ ಹೂಡಿಕೆದಾರರು ಹಾಗೂ ಹೆಚ್ಚಿನ ನಿವ್ವಳ ಮೌಲ್ಯದ ವ್ಯಕ್ತಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಇದರಿಂದ ಕಂಪನಿಯ ಭವಿಷ್ಯದ ಬೆಳವಣಿಗೆ, ಕಾರ್ಯತಂತ್ರ ಹಾಗೂ ಕಾರ್ಯಗತಗೊಳಿಸುವ ಸಾಮರ್ಥ್ಯದ ಮೇಲೆ ಹೂಡಿಕೆದಾರರು ಇಟ್ಟಿರುವ ವಿಶ್ವಾಸ ವ್ಯಕ್ತವಾಗುತ್ತಿದೆ. ಕಂಪನಿಯ ಪ್ರಕಾರ, ಸಂಗ್ರಹಿಸಲಾದ ಬಂಡವಾಳವನ್ನು ಸರ್ಕಾರಿ ಹಾಗೂ ಕೈಗಾರಿಕಾ ವಲಯಗಳಲ್ಲಿ ಎಐ ಆಧಾರಿತ ಪರಿಹಾರಗಳ ವಿಸ್ತರಣೆಗೆ ಬಳಸಲಾಗುತ್ತದೆ. ಜೊತೆಗೆ ಕಂಪನಿಯ ಸ್ವಂತ ತಂತ್ರಜ್ಞಾನ ವೇದಿಕೆಗಳು, ಸಾಸ್ ಸೇವೆಗಳು ಹಾಗೂ ದೊಡ್ಡ ಮಟ್ಟದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲು ಈ ಮೊತ್ತ ನೆರವಾಗಲಿದೆ.

## 'ಕ್ರೆಡಿಟ್ ಪ್ರೀಮಿಯರ್ ಲೀಗ್ 2.0' ಘೋಷಿಸಿದ ಪೈಸಾಬಜಾರ್

ಬೆಂಗಳೂರು

ಭಾರತದಲ್ಲಿ ಕ್ರೆಡಿಟ್ ಜಾಗೃತಿ ಹೆಚ್ಚಿಸಲು ಹೊಸ ಹೆಜ್ಜೆಯಾಗಿ ದೇಶದ ಪ್ರಮುಖ ಹಣಕಾಸು ಉತ್ಪನ್ನ ಮಾರುಕಟ್ಟೆ ಹಾಗೂ ಅತಿದೊಡ್ಡ ಉಚಿತ ಕ್ರೆಡಿಟ್ ಸ್ಕೋರ್ ವೇದಿಕೆಯಾದ ಪೈಸಾಬಜಾರ್ 'ಕ್ರೆಡಿಟ್ ಪ್ರೀಮಿಯರ್ ಲೀಗ್ 2.0' ಅನ್ನು ಮತ್ತೆ ಪರಿಚಯಿಸಿದೆ. ಈ ಉಪಕ್ರಮದಡಿ ದೇಶದಲ್ಲಿ ಅತಿ ಹೆಚ್ಚು ಕ್ರೆಡಿಟ್ ಸ್ಕೋರ್ ಹೊಂದಿರುವ ವ್ಯಕ್ತಿಗೆ ರೂ.1 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ. ಜೊತೆಗೆ ಪ್ರತಿ ರಾಜ್ಯದ ಅತಿ ಹೆಚ್ಚು ಅಂಕ ಪಡೆದ ಚಾಂಪಿಯನ್‌ಗೆ ತಲಾ ರೂ.10,000 ನೀಡಲಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ಉಚಿತ ಕ್ರೆಡಿಟ್ ಸ್ಕೋರ್ ಸೇವೆಯ ಮೂಲಕ ದೇಶದ ಲಕ್ಷಾಂತರ ಜನರಲ್ಲಿ ಕ್ರೆಡಿಟ್ ಜಾಗೃತಿ ಮೂಡಿಸುವಲ್ಲಿ ಪೈಸಾಬಜಾರ್ ಪ್ರಮುಖ ಪಾತ್ರ ವಹಿಸಿದೆ. ತಮ್ಮ ಹಣಕಾಸು ಆರೋಗ್ಯವನ್ನು ಅರ್ಥಮಾಡಿಕೊಳ್ಳಲು, ಪರಿಶೀಲಿಸಲು ಮತ್ತು ಸುಧಾರಿಸಲು ಗ್ರಾಹಕರಿಗೆ ಇದು ನೆರವಾಗಿದೆ. ಪೈಸಾಬಜಾರ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ




ಸಂತೋಷ್ ಅಗರ್ವಾಲ್ ಮಾತನಾಡಿ, "ಕ್ರೆಡಿಟ್ ಕುರಿತು ಅರಿವು ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸುವುದು ನಮ್ಮ ಪ್ರಯಾಣದ ಕೇಂದ್ರವಾಗಿದೆ. ಸಿಪಿಎಲ್ ಮೂಲಕ ಕ್ರೆಡಿಟ್ ಸ್ಕೋರ್ ಕುರಿತ ಸಂಭಾಷಣೆಯನ್ನು ಇನ್ನಷ್ಟು ಜನಸಾಮಾನ್ಯರ ಮಟ್ಟಕ್ಕೆ ತರುತ್ತಿದ್ದೇವೆ. ಗೇಮಿಫಿಕೇಶನ್, ಭಾಗವಹಿಸುವಿಕೆ ಮತ್ತು ಬಹುಮಾನಗಳನ್ನು ಒಟ್ಟುಗೂಡಿಸಿ ಜನರಲ್ಲಿ ಉತ್ತಮ ಹಣಕಾಸು ಅಭ್ಯಾಸ ಬೆಳೆಸುವ ಪ್ರಯತ್ನ ಮಾಡುತ್ತಿದ್ದೇವೆ" ಎಂದು ಹೇಳಿದರು. ಅವರು, "ನಮ್ಮ 'ಹರ್ ಸಪ್ನಾ ಹೋಗಾ ಸಚ್' ಉದ್ದೇಶಕ್ಕೆ ಅನುಗುಣವಾಗಿ ಆರ್ಥಿಕವಾಗಿ ಅರಿವುಳ್ಳ ಮತ್ತು ಉತ್ತಮ ಕ್ರೆಡಿಟ್ ಆರೋಗ್ಯ ಹೊಂದಿರುವ ಭಾರತವನ್ನು ನಿರ್ಮಿಸುವತ್ತ ನಾವು ಗಮನ ಹರಿಸಿದ್ದೇವೆ. ಇದರಿಂದ ಗ್ರಾಹಕರು ಸೂಕ್ತ ಹಣಕಾಸು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ" ಎಂದು ತಿಳಿಸಿದರು.

## ಕೇಂದ್ರ ಬಿಜೆಪಿ ಸರ್ಕಾರದ ಹಿಂದಿ ಯಜಮಾನಿಕೆ ಸಲ್ಲದು

ಬೆಂಗಳೂರು

"ಕೇಂದ್ರ ಬಿಜೆಪಿ ಸರ್ಕಾರದ ಹಿಂದಿ ಯಜಮಾನಿಕೆ ಸಲ್ಲದು' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಶಾಲಾ ಶಿಕ್ಷಣದಲ್ಲಿ ಹಿಂದಿ ಭಾಷೆಗೆ ಅಂಕಗಳ ಬದಲಾಗಿ, ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ರಾಜ್ಯಾದ್ಯಂತ ಭಾರೀ ಬೆಂಬಲ ವ್ಯಕ್ತವಾಗಿದೆ. ಉಪಚುನಾವಣೆ ಪ್ರಚಾರಕ್ಕಾಗಿ ಕರ್ನಾಟಕಕ್ಕೆ ಬಂದಿರುವ ಸುರ್ಜೇವಾಲ ಅವರು ಹಿಂದಿ ವಿವಾದದ ಕುರಿತು ಪ್ರತಿಕ್ರಿಯೆ ನೀಡಿ, ರಾಜ್ಯಗಳ ಭಾಷಾ ಸ್ವಾಯತ್ತತೆ ಮತ್ತು ಬಹುಭಾಷಾ ನೀತಿಗಳನ್ನು ಬೆಂಬಲಿಸಿದ್ದಾರೆ.

## ಎಐ ಆಧಾರಿತ ವಿಶ್ವವಿದ್ಯಾಲಯ ರೂಪಾಂತರಕ್ಕೆ ಸೇಲ್ಸ್‌ಫೋರ್ಸ್ ಜೊತೆ ಮಾಹೆ ಒಪ್ಪಂದ

ಮಣಿಪಾಲ

ಎಐ ಆಧಾರಿತ ವಿಶ್ವವಿದ್ಯಾಲಯವಾಗಿ ರೂಪಾಂತರಗೊಳ್ಳುವ ದಿಶೆಯಲ್ಲಿ ಮಹತ್ವದ ಹೆಜ್ಜೆಯಾಗಿ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ವಿಶ್ವದ ಪ್ರಮುಖ ಎಐ ಸಿಆರ್‌ಎಂ ಸಂಸ್ಥೆಯಾದ ಸೇಲ್ಸ್‌ಫೋರ್ಸ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಈ ಸಹಯೋಗದಡಿ ಮಾಹೆ ತನ್ನ ಸ್ಟೂಡೆಂಟ್ ಲೈಫ್ ಸೈಕಲ್ ಮ್ಯಾನೇಜ್ಮೆಂಟ್ ವೇದಿಕೆಯನ್ನು ಆಧುನೀಕರಿಸಲಿದ್ದು, ಮುಂದಿನ ಎರಡು ವರ್ಷಗಳಲ್ಲಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳಾದ್ಯಂತ 50ಕ್ಕೂ ಹೆಚ್ಚು ಎಐ ಏಜೆಂಟ್‌ಗಳನ್ನು




ನಿಯೋಜಿಸಲು ಯೋಜಿಸಿದೆ. ಮಾಹೆ ರೂಪಿಸಿರುವ 'ಮ್ಯಾಜಿಕ್' ಯೋಜನೆಯ ಭಾಗವಾಗಿ ಈ ವ್ಯವಸ್ಥೆ ಜಾರಿಗೆ ಬರಲಿದೆ. 'ಮ್ಯಾಜಿಕ್' ಎಂದರೆ "ಮಾಹೆ ಏಜೆಂಟಿಕ್ ಇಂಟೆಲಿಜೆಂಟ್ ಕನ್ಸೋಲ್". ಇದರ ಮೂಲಕ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಎಐ ಆಧಾರಿತ ಸೇವೆಗಳನ್ನು ಅಳವಡಿಸಿ, ವಿದ್ಯಾರ್ಥಿಗಳು, ಬೋಧಕ ವರ್ಗ ಮತ್ತು ಆಡಳಿತದ ನಡುವೆ ಹೆಚ್ಚು ಪರಿಣಾಮಕಾರಿ ಸಂಪರ್ಕ ಸಾಧಿಸುವ ಗುರಿ ಹೊಂದಲಾಗಿದೆ. ಈ ಯೋಜನೆಗಾಗಿ ಮಾಹೆ, ಸೇಲ್ಸ್‌ಫೋರ್ಸ್‌ನ ಏಜೆಂಟ್‌ಫೋರ್ಸ್ ಎಜುಕೇಶನ್, ಏಜೆಂಟ್‌ಫೋರ್ಸ್, ಡೇಟಾ 360, ಮ್ಯೂಲ್‌ಸಾಫ್ಟ್ ಮತ್ತು ಟ್ಯಾಬ್ಲೋ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಿದೆ. ಮಾಹೆ ಹಲವು ಕ್ಯಾಂಪಸ್‌ಗಳಲ್ಲಿ 60ಕ್ಕೂ ಹೆಚ್ಚು ದೇಶಗಳ 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಈ ಹೊಸ ವ್ಯವಸ್ಥೆ ಪ್ರವೇಶಾತಿಯಿಂದ ಹಿಡಿದು ನೋಂದಣಿ, ಶೈಕ್ಷಣಿಕ ಪ್ರಗತಿ ಮತ್ತು ಹಳೆಯ ವಿದ್ಯಾರ್ಥಿಗಳ ಸಂಪರ್ಕದವರೆಗೆ ವಿದ್ಯಾರ್ಥಿಯ ಸಂಪೂರ್ಣ ಪಯಣವನ್ನು ಒಂದೇ ವೇದಿಕೆಯಲ್ಲಿ ನಿರ್ವಹಿಸಲು ನೆರವಾಗಲಿದೆ. ಏಜೆಂಟ್‌ಫೋರ್ಸ್ ಎಜುಕೇಶನ್ ವಿದ್ಯಾರ್ಥಿಗಳ ಕುರಿತು 360 ಡಿಗ್ರಿ ಮಾಹಿತಿಯನ್ನು ಒದಗಿಸಲಿದೆ. ಮ್ಯೂಲ್‌ಸಾಫ್ಟ್ ವಿಶ್ವವಿದ್ಯಾಲಯದ ಈಗಿರುವ ವಿದ್ಯಾರ್ಥಿ, ಕಲಿಕೆ ಮತ್ತು ದಾಖಲೆ ವ್ಯವಸ್ಥೆಗಳನ್ನು ರಿಯಲ್‌ಟೈಮ್‌ನಲ್ಲಿ ಸಂಪರ್ಕಿಸಲಿದೆ. ಟ್ಯಾಬ್ಲೋ ಮೂಲಕ ಡೇಟಾ ಆಧಾರಿತ ವಿಶ್ಲೇಷಣೆ ಹಾಗೂ ಡ್ಯಾಶ್‌ಬೋರ್ಡ್‌ಗಳನ್ನು ಪಡೆಯಬಹುದಾಗಿದೆ.

## ಉಪ ಚುನಾವಣೆ ನಾಮಪತ್ರ ವಿವಾದ: ಅರ್ಜಿ ವಜಾಗೊಳಿಸಿದ ಹೈಕೋರ್ಟ್


ಬೆಂಗಳೂರು

ಚುನಾವಣಾ ಆಯೋಗದ ಡಿಜಿಟಲ್ ನಾಮಪತ್ರ ವ್ಯವಸ್ಥೆ ವಿಫಲತೆಯಿಂದಾಗಿ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವುದು ವಿಳಂಬವಾಗಿರುವುದನ್ನು ಪರಿಗಣಿಸದೇ ಭೌತಿಕವಾಗಿ ನಾಮಪತ್ರ ಸಲ್ಲಿಸಿರುವುದನ್ನು ಪರಿಗಣಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸುವಂತೆ ಕೋರಿದ್ದ ಅರ್ಜಿಯೊಂದನ್ನು ಹೈಕೋರ್ಟ್ ಈಚೆಗೆ ವಜಾಗೊಳಿಸಿದೆ.

ಭಾರತ ಸಾರಥಿ
01/04/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಡಿಜಿಟಲ್ ಜನಗಣತಿಗೆ ಕೋಲಾರ ಸಜ್ಜು: ಏ. 1 ರಿಂದ ಸ್ವಯಂ ಗಣತಿಗೆ ಅವಕಾಶ

ಕೋಲಾರ



ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ 2027ರ ಜನಗಣತಿ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಳು ಜಿಲ್ಲೆಯಲ್ಲಿ ಪೂರ್ಣಗೊಂಡಿದ್ದು, ದೇಶದಲ್ಲೇ ಮೊದಲ ಬಾರಿಗೆ ಸಂಪೂರ್ಣ 'ಡಿಜಿಟಲ್ ಜನಗಣತಿ' ನಡೆಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ತಿಳಿಸಿದರು.

ಜಿಲ್ಲಾಧಿಕಾರಿಗಳ ನ್ಯಾಯಾಂಗ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಗಣತಿಯ ಮೊದಲ ಹಂತವಾಗಿ ಮನೆಗಳ ಪಟ್ಟಿ ಮಾಡುವಿಕೆ ಮತ್ತು ಮನೆಗಣತಿ ಕಾರ್ಯಕ್ಕೆ ಚಾಲನೆ ನೀಡಲಾಗುತ್ತಿದೆ ಎಂದರು.

ನಿಮ್ಮ ಮನೆಯ ಗಣತಿ ನೀವೇ ಮಾಡಿಕೊಳ್ಳಿ!

ಸಾರ್ವಜನಿಕರು ತಾವೇ ಸ್ವತಃ ಆನ್‌ಲೈನ್ ಮೂಲಕ ತಮ್ಮ ಮನೆಯ ವಿವರಗಳನ್ನು ದಾಖಲಿಸಲು ಈ ಬಾರಿ ವಿಶೇಷ ಅವಕಾಶ ನೀಡಲಾಗಿದೆ. ಏ. 1 ರಿಂದ 15 ರವರೆಗೆ ಸಾರ್ವಜನಿಕರು www.selfcensus.gov.in ಪೋರ್ಟಲ್‌ಗೆ ಭೇಟಿ ನೀಡಿ ಸುಮಾರು 35 ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ತಮ್ಮ ಮನೆಯ ಗಣತಿಯನ್ನು ತಾವೇ ಮಾಡಿಕೊಳ್ಳಬಹುದು. ಮಾಹಿತಿ ನೀಡಿದ ನಂತರ ಲಭ್ಯವಾಗುವ 'ಸೆನ್ಸಸ್ ಐಡಿ'ಯನ್ನು ಕಾಯ್ದಿರಿಸಿಕೊಂಡರೆ, ಏಪ್ರಿಲ್ 16 ರಿಂದ ಗಣತಿದಾರರು ಮನೆಗೆ ಬಂದಾಗ ಈ ಐಡಿ ನೀಡುವ ಮೂಲಕ ಸಮಯ ಉಳಿಸಬಹುದು ಎಂದು ತಿಳಿಸಿದರು.

ಜಿಲ್ಲೆಯ ಗಣತಿ ನಕಾಶೆ ಮತ್ತು ಸಿಬ್ಬಂದಿ:

ಬ್ಲಾಕ್‌ಗಳ ವಿಂಗಡಣೆ: ಜಿಲ್ಲೆಯನ್ನು ಒಟ್ಟು 3,385 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ (ಗ್ರಾಮೀಣ: 2,540, ನಗರ: 808, ಪಟ್ಟಣ ಪಂಚಾಯಿತಿ: 37).

ಬೃಹತ್ ಸಿಬ್ಬಂದಿ ಪಡೆ: ಗಣತಿ ಕಾರ್ಯಕ್ಕಾಗಿ 2,861 ಗಣತಿದಾರರು ಹಾಗೂ 474 ಮೇಲ್ವಿಚಾರಕರನ್ನು ನೇಮಿಸಲಾಗಿದೆ.

ತರಬೇತಿ: 62 ಫೀಲ್ಡ್ ಟ್ರೈನರ್‌ಗಳಿಗೆ ಈಗಾಗಲೇ ತರಬೇತಿ ನೀಡಲಾಗಿದ್ದು, ಏಪ್ರಿಲ್ 7 ರಿಂದ 12 ರವರೆಗೆ ಗಣತಿದಾರರಿಗೆ ಅಂತಿಮ ಹಂತದ ತರಬೇತಿ ನಡೆಯಲಿದೆ.

ಸಂಭಾವನೆ: ಗಣತಿ ಕಾರ್ಯದಲ್ಲಿ ತೊಡಗುವ ಗಣತಿದಾರರಿಗೆ ಒಂದು ತಿಂಗಳ ಗೌರವ ಸಂಭಾವನೆಯಾಗಿ 25,000 ರೂ. ನೀಡಲಾಗುವುದು.

ಮಾಹಿತಿ ಅತ್ಯಂತ ಗೋಪ್ಯ: ಡಿಜಿಟಲ್ ಗಣತಿಯಲ್ಲಿ ಸಂಗ್ರಹವಾಗುವ ಎಲ್ಲಾ ಮಾಹಿತಿಗಳು 'ಎನ್‌ಕ್ರಿಪ್ಟ್' ಆಗಿರುವುದರಿಂದ ಅತ್ಯಂತ ಗೋಪ್ಯವಾಗಿರಲಿವೆ. ಈ ದತ್ತಾಂಶವನ್ನು ದೇಶದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳ ನಿರೂಪಣೆಗೆ ಮಾತ್ರ ಬಳಸಿಕೊಳ್ಳಲಾಗುತ್ತದೆ. ಸಾರ್ವಜನಿಕರು ಯಾವುದೇ ಆತಂಕವಿಲ್ಲದೆ ನಿಖರ ಮಾಹಿತಿ ನೀಡುವ ಮೂಲಕ ಈ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಎಸ್. ಎಂ. ಮಂಗಳ ಹಾಗೂ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಲೋಕಕಲ್ಯಾಣಾರ್ಥ ಅಖಂಡ ರಾಮಕೋಟಿ ಜಪ



ಶ್ರೀನಿವಾಸಪುರ

ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದ ಅಭಯಾಂಜನೇಯಸ್ವಾಮಿ ದೇವಾಲಯದಲ್ಲಿ ಸೋಮವಾರ ಅಭಯಾಂಜನೇಯಸ್ವಾಮಿ ದೇವಾಲಯ ಸೇವಾ ಟ್ರಸ್ಟ್ ವತಿಯಿಂದ 13ನೇ ವರ್ಷದ ಅಖಂಡ ಶ್ರೀರಾಮಕೋಟಿ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಡಾ. ಎನ್. ಗೋಪಾಲಕೃಷ್ಣಗೌಡ, "ಕಳೆದ 13 ವರ್ಷಗಳಿಂದ ನಿರಂತರವಾಗಿ ಅಖಂಡ ರಾಮಕೋಟಿಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಕೇವಲ ಧಾರ್ಮಿಕ ಕಾರ್ಯಗಳಷ್ಟೇ ಅಲ್ಲದೆ, ಈ ಬಾರಿ 15 ಮಂದಿ ವಿಶೇಷ ಚೇತನರಿಗೆ ವೀಲ್ ಚೇರ್ ವಿತರಣೆ, ಶ್ರವಣದೋಷವುಳ್ಳವರಿಗೆ ಶ್ರವಣೋಪಕರಣಗಳ ವಿತರಣೆ ಹಾಗೂ ರಕ್ತದಾನ ಶಿಬಿರದಂತಹ ಮಾನವೀಯ ಸೇವೆಗಳನ್ನು ಹಮ್ಮಿಕೊಳ್ಳಲಾಗಿದೆ," ಎಂದು ತಿಳಿಸಿದರು.

ಲೋಕಕಲ್ಯಾಣಾರ್ಥ ಜಪ-ತಪ: ದೇವಾಲಯದ ಪ್ರಧಾನ ಅರ್ಚಕ ಕೆ.ಬಿ. ಚಲಪತಿ ಮಾತನಾಡಿ, "ಪ್ರತಿ ವರ್ಷ ಲೋಕಕಲ್ಯಾಣಾರ್ಥವಾಗಿ ಈ ದೇವತಾ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತಿದೆ. ಎರಡು ದಿನಗಳ ಕಾಲ ನಡೆಯುವ ಈ ಅಖಂಡ ರಾಮಕೋಟಿ ಸಂದರ್ಭದಲ್ಲಿ ಭಕ್ತಾಧಿಗಳಿಗೆ ನಿರಂತರ ಅನ್ನಸಂತರ್ಪಣೆ ನಡೆಯಲಿದೆ," ಎಂದರು.

ಅಖಂಡ ರಾಮಕೋಟಿ ಹಿನ್ನೆಲೆಯಲ್ಲಿ ಅಭಯಾಂಜನೇಯಸ್ವಾಮಿ ವಿಗ್ರಹಕ್ಕೆ ವಿಶೇಷ ಅಭಿಷೇಕ ಹಾಗೂ ಅಲಂಕಾರಗಳನ್ನು ಮಾಡಲಾಗಿತ್ತು. ವಿವಿಧ ಭಜನಾ ತಂಡಗಳಿಂದ ಭಕ್ತಿಗೀತೆಗಳು ಮೊಳಗಿದವು. ಕಂಬಾಲಪಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಟ್ರಸ್ಟ್ ಉಪಾಧ್ಯಕ್ಷ ಬೀರಪ್ಪ, ಖಜಾಂಚಿ ಜಿ. ಅಂಕಿತ, ಸದಸ್ಯರಾದ ರಾಜಾರೆಡ್ಡಿ, ಎ.ಜಿ. ರಾಮಕೃಷ್ಣಪ್ಪ, ಜಿ. ನಾರಾಯಣಸ್ವಾಮಿ, ವಿ. ಮುನಿಶಾಮಪ್ಪ, ಚಲಪತಿ, ಕೆ.ಜಿ. ಸುಧಾಕರ ಹಾಗೂ ರಾಮಕೃಷ್ಣಪ್ಪ ಉಪಸ್ಥಿತರಿದ್ದರು.

# 'ಸಹಕಾರ ಸಂಘಗಳ ಸದ್ಬಳಕೆ ಮಾಡಿಕೊಳ್ಳಿ'

ಕನಕಪುರ

"ರೈತರ ಅಭ್ಯುದಯಕ್ಕಾಗಿ ಇರುವ ಸಹಕಾರ ಸಂಸ್ಥೆಗಳನ್ನು ಬೆಳೆಸುವ ಮೂಲಕ ಸರ್ಕಾರದ ಸವಲತ್ತುಗಳನ್ನು ಪ್ರತಿಯೊಬ್ಬ ರೈತರಿಗೂ ತಲುಪಿಸುವ ಕೆಲಸವಾಗಬೇಕು," ಎಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಡಿ. ವಿಜಯ್ ದೇವ್ ತಿಳಿಸಿದರು.

ತಾಲ್ಲೂಕಿನ ಸಾತನೂರು ಹೋಬಳಿಯ ಅಚ್ಚಲು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನಿಂಗೇಗೌಡ ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ನಾಯಕರ ಮಾರ್ಗದರ್ಶನದಲ್ಲಿ ಅಭಿವೃದ್ಧಿ: "ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಗ್ರಾಮದ ರೈತರ ಬೆನ್ನೆಲುಬಾಗಿವೆ. ನಮ್ಮ ನಾಯಕರಾದ ಡಿ.ಕೆ. ಶಿವಕುಮಾರ್ ಹಾಗೂ ಡಿ.ಕೆ. ಸುರೇಶ್ ಅವರ ಮಾರ್ಗದರ್ಶನದಲ್ಲಿ ಸರ್ಕಾರದಿಂದ ಬರುವ ಅನುದಾನ ಹಾಗೂ ಸವಲತ್ತುಗಳನ್ನು ಬಳಸಿಕೊಂಡು ನೂತನ ಅಧ್ಯಕ್ಷರು ಸಂಘವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಲಿ," ಎಂದು ವಿಜಯ್ ದೇವ್ ಹಾರೈಸಿದರು.

ಸಂಘದ ಏಳಿಗೆಗೆ ಶ್ರಮಿಸುವ ಪಣ: ನೂತನ ಅಧ್ಯಕ್ಷ ನಿಂಗೇಗೌಡ ಮಾತನಾಡಿ, "ನನ್ನ ಮೇಲೆ ನಂಬಿಕೆ ಇಟ್ಟು ಈ ಜವಾಬ್ದಾರಿ ನೀಡಿದ ನಾಯಕರಿಗೆ ಧನ್ಯವಾದ ಅರ್ಪಿಸುತ್ತೇನೆ. ನನ್ನ ಅಧಿಕಾರದ ಅವಧಿಯಲ್ಲಿ ಸಂಘದ ಸದಸ್ಯರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸಲು ಶ್ರಮಿಸುತ್ತೇನೆ," ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಸುರೇಶ್, ಕೃಷ್ಣಪ್ಪ, ರಂಗಯ್ಯ, ಗ್ರಾ.ಪಂ. ಮಾಜಿ ಅಧ್ಯಕ್ಷ ನಟೇಶ್, ಸಂಘದ ನಿರ್ದೇಶಕರುಗಳಾದ ಲೋಕೇಶ್, ಶಶಿಕಲಾ ಬೆಟ್ಟೇಗೌಡ, ಜುಬೇದ್ ಷರೀಫ್, ಸಿಇಒ ವಿಜಯ್ ಕುಮಾರ್ ಯಾದವ್ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಮಹಿಳೆಯರ ಸರ್ವತೋಮುಖ ಬೆಳವಣಿಗೆಗೆ ಸಮಾಜದ ಬೆಂಬಲ ಅಗತ್ಯ: ಎನ್. ಶೋಭಾ

ದೊಡ್ಡಬಳ್ಳಾಪುರ

"ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದು, ಮಹಿಳಾ ಸಬಲೀಕರಣದ ಆಶಯ ನನಸಾಗುವತ್ತ ಸಾಗುತ್ತಿದೆ," ಎಂದು ಪಟ್ಟಣದ ಪೊಲೀಸ್ ನಿರೀಕ್ಷಕಿ ಎನ್. ಶೋಭಾ ತಿಳಿಸಿದರು.

ನಗರದ ಅಭಿನೇತ್ರಿ ಸಾಂಸ್ಕೃತಿಕ ಸಂಘ ಹಾಗೂ ಮಹಿಳಾ ಸಂಘದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಮಹಿಳಾ ಸಂಭ್ರಮ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.




ಶಿಕ್ಷಣ ಮತ್ತು ಉದ್ಯೋಗದ ಮೂಲಕ ಶೋಷಣೆ ಮುಕ್ತ ಸಮಾಜ: ಕೌಟುಂಬಿಕ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಮಹಿಳೆಯರ ಪಾತ್ರ ಅನನ್ಯ. ಆದರೆ, ಇಂದಿಗೂ ಕೌಟುಂಬಿಕ ಕಲಹಗಳಲ್ಲಿ ಹೆಚ್ಚು ದೌರ್ಜನ್ಯಕ್ಕೊಳಗಾಗುತ್ತಿರುವುದು ಮಹಿಳೆಯರೇ ಎಂಬುದು ವಿಷಾದನೀಯ. ಈ ಹಿನ್ನೆಲೆಯಲ್ಲಿ ಅವರಿಗೆ ಗುಣಮಟ್ಟದ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸಿ, ಎಲ್ಲಾ ರಂಗಗಳಲ್ಲಿ ಮುನ್ನೆಲೆಗೆ ಬರುವಂತಹ ಯೋಜನೆಗಳನ್ನು ರೂಪಿಸಬೇಕಾದ ಅನಿವಾರ್ಯತೆ ಇದೆ ಎಂದು ಶೋಭಾ ಆಶಯ ವ್ಯಕ್ತಪಡಿಸಿದರು.

ಸಂವಿಧಾನದ ಸಮಾನತೆ ಅನುಷ್ಠಾನಕ್ಕೆ ತನ್ನಿ: ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರೇಮ್‌ಕುಮಾರ್ ಮಾತನಾಡಿ, ಸಂವಿಧಾನದಲ್ಲಿ ಸ್ತ್ರೀ-ಪುರುಷರಿಗೆ ಸಮಾನ ಅವಕಾಶಗಳಿದ್ದರೂ ಮಹಿಳೆಯರು ಶೋಷಣೆಗೆ ಒಳಗಾಗುತ್ತಿದ್ದಾರೆ. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ನಮ್ಮೆಲ್ಲರ ಹೊಣೆ ಎಂದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಪ್ರೊ. ಕೆ.ಆರ್. ರವಿಕಿರಣ್ ಮಾತನಾಡಿ, ಮಹಿಳೆಯರು ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಹಿಸುತ್ತಿರುವ ಜವಾಬ್ದಾರಿ ಶ್ಲಾಘನೀಯ ಎಂದರು.

ಸಾಂಸ್ಕೃತಿಕ ಕಳೆ ನೀಡಿದ ನೃತ್ಯ-ಕೋಲಾಟ: ಅಭಿನೇತ್ರಿ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ರೇವತಿ ಅನಂತರಾಮ್ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು ಮತ್ತು ಗಣ್ಯರನ್ನು ಸನ್ಮಾನಿಸಲಾಯಿತು. ನಂತರ ನಡೆದ ಕೋಲಾಟ, ಭರತನಾಟ್ಯ, ಜಾನಪದ ನೃತ್ಯ, ಭಜನೆ ಹಾಗೂ ಸಾಮೂಹಿಕ ನೃತ್ಯಗಳು ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಮೆರುಗು ನೀಡಿದವು.

ಸಭೆಯಲ್ಲಿ ನಿಯೋಜಿತ ಸಿವಿಲ್ ನ್ಯಾಯಾಧೀಶರಾದ ಸಂಘಮಿತ್ರ, ಪತ್ರಕರ್ತ ಪ್ರದೀಪ್‌ಕುಮಾರ್, ನೇಕಾರ ಹೋರಾಟ ಸಮಿತಿ ಅಧ್ಯಕ್ಷ ಬಿ.ಜಿ. ಹೇಮಂತರಾಜು, ಶರತ್ ಪಟೇಲ್, ಮರಿಯಮ್ಮ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಕ್ರೀಡಾಪಟು ಧನುಷ್ ಸಾಧನೆಗೆ ನಂಜವಧೂತ ಶ್ರೀಗಳ ಮೆಚ್ಚುಗೆ



ಮಧುಗಿರಿ

ತಾಲ್ಲೂಕಿನ ಸುಂಕಾಪುರ ಗ್ರಾಮದ ಪ್ರತಿಭಾನ್ವಿತ ಯುವ ಕ್ರೀಡಾಪಟು ಧನುಷ್ ಅವರು ಬೆಂಗಳೂರಿನ ಉಳ್ಳಾಲದಲ್ಲಿರುವ ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಡಾ. ಶ್ರೀ ಶ್ರೀ ಶ್ರೀ ನಂಜವಧೂತ ಮಹಾಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಧನುಷ್‌ಗೆ ಶುಭ ಹಾರೈಸಿದ ಶ್ರೀಗಳು, "ನಿನ್ನ ಮುಂದಿನ ಭವಿಷ್ಯ ಉಜ್ವಲವಾಗಿರಲಿ. ಜಿಲ್ಲೆ, ರಾಜ್ಯ ಹಾಗೂ ದೇಶದ ಮಟ್ಟದಲ್ಲಿ ಕೀರ್ತಿ ತಂದುಕೊಡುವಂತಹ ಸಾಧನೆ ಮಾಡಲಿ," ಎಂದು ಆಶೀರ್ವದಿಸಿದರು. ಕ್ರೀಡಾ ಕ್ಷೇತ್ರದಲ್ಲಿ ಯುವಜನತೆ ಹೆಚ್ಚಿನ ಆಸಕ್ತಿ ತೋರಬೇಕು ಮತ್ತು ನಿರಂತರ ಪರಿಶ್ರಮದಿಂದ ಯಶಸ್ಸು ಗಳಿಸಬೇಕು ಎಂದು ಅವರು ಇದೇ ವೇಳೆ ಸಲಹೆ ನೀಡಿದರು.

ತಾಲ್ಲೂಕಿಗೆ ಕೀರ್ತಿ ತಂದ ಧನುಷ್: ಧನುಷ್ ತಮ್ಮ ಶಿಸ್ತು ಮತ್ತು ಕಠಿಣ ಅಭ್ಯಾಸದ ಮೂಲಕ ಕ್ರೀಡಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದು, ಇದೀಗ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುವುದು ಮಧುಗಿರಿ ತಾಲ್ಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ. ಇವರ ಸಾಧನೆಯನ್ನು ಕಂಡು ಸ್ಥಳೀಯರು ಹಾಗೂ ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಯುವ ಮುಖಂಡ ಸುಂಕಾಪುರ ಸಿದ್ದರಾಜು, ಧನುಷ್ ಅವರ ತಂದೆ ಮಂಜುನಾಥ್, ಮುಖಂಡರಾದ ಕಾಮರಾಜ್ ಮತ್ತು ಸಿದ್ದಪ್ಪ ಉಪಸ್ಥಿತರಿದ್ದರು.

# ದುಶ್ಚಟಗಳಿಂದ ದೂರವಿದ್ದು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಿ: ಸಚಿವ ಮುನಿಯಪ್ಪ

ದೊಡ್ಡಬಳ್ಳಾಪುರ

ಯುವಜನತೆ ದುಶ್ಚಟಗಳ ದಾಸರಾಗದೆ ಕ್ರೀಡಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ರಾಜ್ಯ ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ತಿಳಿಸಿದರು.

ತಾಲ್ಲೂಕಿನ ತೂಬಗೆರೆ ಹೋಬಳಿಯ ಚಿಕ್ಕಮುದ್ದೇನಹಳ್ಳಿ ಗ್ರಾಮದಲ್ಲಿ ಯೂತ್ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದ್ದ 'ಕೆ.ಹೆಚ್.ಎಂ. ಪ್ರೀಮಿಯರ್ ಲೀಗ್' ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವುದು ಕ್ರೀಡೆಯ ಶಿಸ್ತು ಎಂದು ಅವರು ಕ್ರೀಡಾಪಟುಗಳಿಗೆ ಕಿವಿಮಾತು ಹೇಳಿದರು.

ರೋಚಕ ಫೈನಲ್ ಗಂಡರಾಜಪುರಕ್ಕೆ ಜಯ: ಹೋಬಳಿ ಮಟ್ಟದ ಈ ಪಂದ್ಯಾವಳಿಯಲ್ಲಿ ಒಟ್ಟು 24 ತಂಡಗಳು ಭಾಗವಹಿಸಿದ್ದವು. ಫೈನಲ್ ಪಂದ್ಯದಲ್ಲಿ ಗಂಡರಾಜಪುರ ಮತ್ತು ಎಸ್. ನಾಗೇನಹಳ್ಳಿ ತಂಡಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಅಂತಿಮವಾಗಿ ಗಂಡರಾಜಪುರ ತಂಡ ಪ್ರಥಮ ಸ್ಥಾನ ಗಳಿಸಿ ಟ್ರೋಫಿ ಎತ್ತಿಹಿಡಿದರೆ, ಎಸ್. ನಾಗೇನಹಳ್ಳಿ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.



ರಸ್ತೆ ಡಾಂಬರೀಕರಣಕ್ಕೆ ಸಚಿವರ ಭರವಸೆ: ಕಳೆದ 20 ವರ್ಷಗಳಿಂದ ತೂಬಗೆರೆ ಕ್ರಾಸ್‌ನಿಂದ ಕಲ್ಲುಕೋಟೆ ಗ್ರಾಮದವರೆಗೆ ರಸ್ತೆ ಡಾಂಬರೀಕರಣಗೊಳ್ಳದೆ ಸಾರ್ವಜನಿಕರು ಗುಂಡಿ ಬಿದ್ದ ರಸ್ತೆಯಲ್ಲಿ ಸಂಚರಿಸಲು ಹೈರಾಣಾಗಿದ್ದರು. ಈ ಬಗ್ಗೆ ಚಿಕ್ಕಮುದ್ದೇನಹಳ್ಳಿ ಗ್ರಾಮಸ್ಥರು ಸಚಿವರಿಗೆ ಮನವಿ ಸಲ್ಲಿಸಿ ಪ್ರತಿಭಟನೆಯ ಧ್ವನಿ ಎತ್ತಿದರು. ತಕ್ಷಣವೇ ಸ್ಪಂದಿಸಿದ ಸಚಿವ ಕೆ.ಹೆಚ್. ಮುನಿಯಪ್ಪ, ಬರುವ ಮೇ ತಿಂಗಳೊಳಗೆ ರಸ್ತೆ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟನೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗೇಶ್, ಘಾಟಿ ಸುಬ್ರಹ್ಮಣ್ಯ ದೇವಾಲಯ ಪ್ರಾಧಿಕಾರದ ಸದಸ್ಯ ರಂಗಪ್ಪ, ಆರ್.ವಿ. ಮಹೇಶ್, ತೂಬಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿಸಿದ್ದಪ್ಪ, ದೇವನಹಳ್ಳಿ ಯುವ ಕಾಂಗ್ರೆಸ್ ಅಧ್ಯಕ್ಷ ಸಾಗರ್, ತೂಬಗೆರೆ ಯುವ ಕಾಂಗ್ರೆಸ್ ಅಧ್ಯಕ್ಷ ನರಸಿಂಹಮೂರ್ತಿ ಸೇರಿದಂತೆ ಹಲವು ಮುಖಂಡರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

# ಚನ್ನರಾಯಪುರ ಡೇರಿ ಅಧ್ಯಕ್ಷರ ಆಯ್ಕೆ

ಕೋಲಾರ

ತಾಲ್ಲೂಕಿನ ಹುತ್ತೂರು ಹೋಬಳಿಯ ಚನ್ನರಾಯಪುರ ಹಾಲು ಉತ್ಪಾದಕರ ಸಹಕಾರ ಸಂಘದ (ಡೈರಿ) ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಸಿ.ಎನ್. ಚಂದ್ರಪ್ಪ ಹಾಗೂ ಉಪಾಧ್ಯಕ್ಷರಾಗಿ ಶ್ರೀನಿವಾಸ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ತಲಾ ಒಂದೊಂದು ನಾಮಪತ್ರಗಳು ಮಾತ್ರ ಸಲ್ಲಿಕೆಯಾಗಿದ್ದರಿಂದ, ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ವೆಂಕಟೇಶ್ ಬಾಬು ಅವರು ಇಬ್ಬರ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದರು.

ಇದಕ್ಕೂ ಮೊದಲು ನಡೆದ ನಿರ್ದೇಶಕರ ಚುನಾವಣೆಯಲ್ಲಿ ಎಸ್. ವೆಂಕಟರಾಮಪ್ಪ, ಜಿ. ವೆಂಕಟೇಶಪ್ಪ, ವೆಂಕಟೇಶಪ್ಪ, ಸಿ.ಎ. ಅಂಬರೀಶ್, ಆರ್. ಗೋಪಾಲಕೃಷ್ಣ, ಲಕ್ಷಮ್ಮ, ಲಕ್ಷ್ಮೀದೇವಮ್ಮ, ಸಂಪತ್ ಹಾಗೂ ಸಿ. ಅಶ್ವಥ್ ಅವರುಗಳು ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ-ಉಪಾಧ್ಯಕ್ಷರನ್ನು ಗ್ರಾ.ಪಂ. ಸದಸ್ಯ ಸಿ.ವಿ. ಹನುಮೇಗೌಡ, ಮಾಜಿ ಸದಸ್ಯರಾದ ಮುನಿರಾಯಣಸ್ವಾಮಿ, ಆರ್. ನಾರಾಯಣಸ್ವಾಮಿ, ವೈ. ನಾರಾಯಣಸ್ವಾಮಿ, ಮಂಜುನಾಥ್ ಹಾಗೂ ಸಂಘದ ಕಾರ್ಯದರ್ಶಿ ರಮೇಶ್ ಸೇರಿದಂತೆ ಗ್ರಾಮದ ಹಿರಿಯರು ಮತ್ತು ಹಾಲು ಉತ್ಪಾದಕರು ಹೂಮಾಲೆ ಹಾಕಿ ಅಭಿನಂದಿಸಿದರು.

# ತಳ ಮಟ್ಟದಿಂದ ಪಕ್ಷ ಸಂಘಟನೆ ಒತ್ತು ನೀಡಿ: ಶಾಸಕ ಕೊತ್ತೂರು ಮಂಜುನಾಥ್

ಕೋಲಾರ

"ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷವನ್ನು ತಳಮಟ್ಟದಿಂದ ಸಂಘಟಿಸಬೇಕು," ಎಂದು ಶಾಸಕ ಕೊತ್ತೂರು ಜಿ. ಮಂಜುನಾಥ್ ತಿಳಿಸಿದರು.

ಮಾಲೂರು ತಾಲ್ಲೂಕಿನ ಹುಳದೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಎನ್. ಹೇಮಮಾಲಿನಿ ಅವರು ಕೋಲಾರ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ, ನಗರದ ಹೊರವಲಯದ ಅತಿಥಿಗೃಹದಲ್ಲಿ ಶಾಸಕರು ಹಾಗೂ ಎಂಎಲ್‌ಸಿ ಅನಿಲ್ ಕುಮಾರ್ ಅವರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕರು, "ರಾಜ್ಯದ ಕಾಂಗ್ರೆಸ್ ಸರ್ಕಾರ ಮಹಿಳೆಯರ ಸ್ವಾವಲಂಬನೆಗಾಗಿ ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆ ಸೇರಿದಂತೆ ಹಲವು ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಮುಂಬರುವ ಚುನಾವಣೆಗಳಲ್ಲಿ ಈ ಅಭಿವೃದ್ಧಿ ಯೋಜನೆಗಳ ಕುರಿತು ಮಹಿಳೆಯರಲ್ಲಿ ಅರಿವು ಮೂಡಿಸಿ, ಮಹಿಳಾ ಶಕ್ತಿಯನ್ನು ಪಕ್ಷದ ಪರವಾಗಿ ಸಂಘಟಿಸಬೇಕು," ಎಂದು ಸಲಹೆ ನೀಡಿದರು. ಅಲ್ಲದೆ, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಯುತ್ತಿದ್ದು, ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಎಚ್ಚರವಹಿಸಬೇಕು ಎಂದರು.



ವಿಧಾನ ಪರಿಷತ್ ಸದಸ್ಯ ಅನಿಲ್ ಕುಮಾರ್ ಮಾತನಾಡಿ, "ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ ಯಾವಾಗಲೂ ಬೆಲೆ ಇದೆ. ಸಣ್ಣಪುಟ್ಟ ವ್ಯತ್ಯಾಸಗಳಿಗೆ ಬೇಸರ ಮಾಡಿಕೊಳ್ಳದೆ ನಿರಂತರ ಜನಸಂಪರ್ಕದೊಂದಿಗೆ ಪಕ್ಷವನ್ನು ಗಟ್ಟಿಗೊಳಿಸಲು ಶ್ರಮಿಸಬೇಕು. ಸಂಘಟನೆ ಬಲಿಷ್ಠಗೊಂಡರೆ ಮಾತ್ರ ಎಲ್ಲಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಸಾಧ್ಯ," ಎಂದು ನೂತನ ಅಧ್ಯಕ್ಷೆಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ, ಬೆಂಗಳೂರು ಉತ್ತರ ವಿವಿ ಸಿಂಡಿಕೇಟ್ ಸದಸ್ಯ ಸೀಸಂದ್ರ ಗೋಪಾಲ್ ಗೌಡ, ಮುಖಂಡರಾದ ನದೀಮ್, ಚಿನ್ನಾಪುರ ನಾರಾಯಣಸ್ವಾಮಿ, ಎಸ್ಸಿ-ಎಸ್ಟಿ ಘಟಕದ ಅಧ್ಯಕ್ಷೆ ಮಹಾಲಕ್ಷ್ಮೀ ಹಂಸವೇಣಿ, ಲತಾ, ಪಲ್ಲವಿ, ಮಾಲಾ ಹಾಗೂ ಸುನಂದಾ ಉಪಸ್ಥಿತರಿದ್ದರು.

# ಸರಕಾರಿ ಶಾಲೆಗೆ ಉಚಿತ ಕಂಪ್ಯೂಟರ್ ಕೊಡುಗೆ



ರಾಮನಗರ

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಆಧಾರಿತ ಶಿಕ್ಷಣ ಸಿಗಬೇಕೆಂಬ ಆಶಯದೊಂದಿಗೆ ಬಿಡದಿ ಸಮೀಪದ ನಿಂಗೇಗೌಡನದೊಡ್ಡಿ ಗ್ರಾಮದ ಜಿಎಲ್‌ಪಿಎಸ್ ಸರಕಾರಿ ಶಾಲೆಗೆ ಬೆಂಗಳೂರಿನ ಭರವಸೆ ಸಂಸ್ಥೆ ವತಿಯಿಂದ ಉಚಿತ ಕಂಪ್ಯೂಟರ್‌ಗಳನ್ನು ವಿತರಿಸಲಾಯಿತು.

ತಾಲ್ಲೂಕಿನ ಮಂಚನಾಯ್ಕನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ನಿಂಗೇಗೌಡನದೊಡ್ಡಿ ಶಾಲೆಗೆ ಕಂಪ್ಯೂಟರ್‌ಗಳನ್ನು ಹಸ್ತಾಂತರಿಸಿದ ಬಳಿಕ ಭರವಸೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಸುನೀಲ್‌ಗೌಡ ಮಾತನಾಡಿ, ನಗರ ಪ್ರದೇಶದ ವಿದ್ಯಾರ್ಥಿಗಳ ಜತೆಗೆ ಗ್ರಾಮೀಣ ಭಾಗದ ಮಕ್ಕಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶದಿಂದ ಈ ಉಪಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶಾಲೆಯಲ್ಲಿ ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಕಂಪ್ಯೂಟರ್ ಸೌಲಭ್ಯಗಳ ಕೊರತೆಯಿಂದ ಡಿಜಿಟಲ್ ಕಲಿಕೆಯಲ್ಲಿ ಹಿಂದುಳಿದಿದ್ದರು.

ಇದೀಗ ನೀಡಲಾದ ಕಂಪ್ಯೂಟರ್ ವ್ಯವಸ್ಥೆಗಳು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ಮತ್ತು ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಿವೆ. ಡಿಜಿಟಲ್ ಶಿಕ್ಷಣವು ಇಂದಿನ ಕಾಲದ ಅವಶ್ಯಕತೆ ಆಗಿದ್ದು, ವಿದ್ಯಾರ್ಥಿಗಳ ಭವಿಷ್ಯದ ಶೈಕ್ಷಣಿಕ ಅಭಿವೃದ್ಧಿಗೆ ಇದು ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿಯೂ ಶಿಕ್ಷಣ, ಆರೋಗ್ಯ ಸಂಬಂಧಿತ ಸಮಾಜಮುಖಿ ಕಾರ್ಯಗಳನ್ನು ಮುಂದುವರಿಸುವುದಾಗಿ ತಿಳಿಸಿದರು.

ಈ ವೇಳೆ ಶಾಲೆಯ ಮುಖ್ಯಶಿಕ್ಷಕ ಕೆ.ಎಲ್.ಶಂಕರ್, ಸಹಶಿಕ್ಷಕಿ ಶಕುಂತಲಾ, ಹಾಗೂ ಗ್ರಾಮಸ್ಥರು ಕಂಪ್ಯೂಟರ್‌ಗಳನ್ನು ಕೊಡುಗೆ ನೀಡಿದ ಭರವಸೆ ಸಂಸ್ಥೆಯ ಈ ಸಾಮಾಜಿಕ ಸೇವೆಯನ್ನು ಪ್ರಶಂಸಿಸಿ ಕೃತಜ್ಞತೆ ಸಲ್ಲಿಸಿದರು. ಶಾಲೆಯ ಮಕ್ಕಳು ಕಂಪ್ಯೂಟರ್ ಶಿಕ್ಷಣ ಕಲಿಕೆಯನ್ನು ಉತ್ಸಾಹದಿಂದ ಆರಂಭಿಸಿದರು.

# ವಿಜೃಂಭಣೆಯಿಂದ ಜರುಗಿದ ಶ್ರೀಅವರಸದಮ್ಮ ಜಾತ್ರೆ, ಬಸವೇಶ್ವರಸ್ವಾಮಿ ಅಗ್ನಿಕೊಂಡ ಮಹೋತ್ಸವ

ರಾಮನಗರ

ತಾಲ್ಲೂಕಿನ ಹೆಸರಾಂತ ಶ್ರೀಅವಸರದಮ್ಮ (ಪಾರ್ವತಿದೇವಿ) ಕ್ಷೇತ್ರದಲ್ಲಿ ಜಾತ್ರೆ ಹಾಗೂ ಬಸವೇಶ್ವರಸ್ವಾಮಿ ಅಗ್ನಿಕೊಂಡ ಮಹೋತ್ಸವವು ಸೋಮವಾರ ಸಾವಿರಾರು ಭಕ್ತರ ಆರಾಧನೆಯೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಬಿಡದಿ ಹೋಬಳಿ ತಾಳಕುಪ್ಪೆ, ಚಿನ್ನೇಗೌಡನದೊಡ್ಡಿ ಗ್ರಾಮದ ಬಳಿಯಿರುವ ಶ್ರೀಅವಸರದಮ್ಮ(ಪಾರ್ವತಿದೇವಿ) ಜಾತ್ರಾ ಮಹೋತ್ಸವದ ಅಂಗವಾಗಿ ಪ್ರತಿವರ್ಷದಂತೆ ಶ್ರೀಕ್ಷೇತ್ರದಲ್ಲಿರುವ ಬಸವೇಶ್ವರಸ್ವಾಮಿ ಹಾಗೂ ಮುತ್ತರಾಯಸ್ವಾಮಿ ದೇವರುಗಳ ಪೂಜೆ ಹಾಗೂ ಮೆರವಣಿಗೆಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಸೋಮವಾರ ಬೆಳಿಗ್ಗೆ 10 ಗಂಟೆಗೆ ದೇವಾಲಯದ ಅರ್ಚಕ ಬಸವರಾಜುರವರು ಭಕ್ತಾಧಿಗಳ ಹರ್ಷೋದ್ಗಾರದೊಂದಿಗೆ ಯಶಸ್ವಿಯಾಗಿ ಬಸವೇಶ್ವರ ಅಗ್ನಿಕೊಂಡ ಪ್ರವೇಶ ಮಾಡಿದ್ದನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

ನಾಲ್ಕು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವದ ಪ್ರಯುಕ್ತ ಮಾರ್ಚ್ 28ರ ಶನಿವಾರ ಸಂಜೆ ಶ್ರೀಮುತ್ತುರಾಯಸ್ವಾಮಿ ದೇವರ ಅನ್ನಸಂತರ್ಪಣೆಯೊಂದಿಗೆ ಅಗ್ನಿಕೊಂಡ ತೆಗೆಯುವ ಕಾರ್ಯಕ್ಕೆ ವಿದ್ಯುಕ್ತವಾಗಿ ಚಾಲನೆ ದೊರೆಯಿತು. ಭಾನುವಾರ ಸಂಜೆ ಅವಸರದಮ್ಮ ದೇವಾಲಯದಲ್ಲಿ ಹೋಮ, ಅಭಿಷೇಕ, ಕಳಸ ಸ್ಥಾಪನೆ ಹಾಗೂ ದೇವಿಗೆ ವಿಶೇಷ ಅಲಂಕಾರ ಕೈಂಕರ್ಯಗಳು ಜರುಗಿದವು. ಸೋಮವಾರ ಮುಂಜಾನೆ ಸುತ್ತಮುತ್ತಲಿನ ಗ್ರಾಮಸ್ಥರು ಕುರ್ಜು ಆರತಿಗಳನ್ನು ಹೊತ್ತುತಂದು ಪೂಜೆ ಸಲ್ಲಿಸಿದರು.



ಬಿದಿರಿನಿಂದ ತಯಾರಿಸಿದ ಬುಟ್ಟಿಯಲ್ಲಿ ನಾನಾ ಪುಷ್ಪಗಳು ಹಾಗೂ ಹೊಂಬಾಳೆಯಿಂದ ಆಕರ್ಷಕವಾಗಿ ಅಲಂಕರಿಸಿದ ಕುರ್ಜಿನ ಆರತಿಗಳನ್ನು ಮಹಿಳೆಯರಾಧಿಯಾಗಿ ಭಕ್ತರು ತಲೆಯ ಮೇಲೆ ಹೊತ್ತುತಂದು ಶ್ರೀದೇವಿಗೆ ಪೂಜೆ ಅರ್ಪಿಸಿದರು. ದೇಗುಲದ ಮುಂಭಾಗದಲ್ಲಿ ನಿರ್ಮಿಸಿರುವ ಮಂಟಪದಲ್ಲಿ ಶ್ರೀ ಬಸವೇಶ್ವರಸ್ವಾಮಿ, ಅವಸರದಮ್ಮ ಮತ್ತು ಮುತ್ತುರಾಯಸ್ವಾಮಿ ದೇವರುಗಳ ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸಲಾಯಿತು. ನಂತರ ತಮಟೆ ವಾದ್ಯ ಮತ್ತು ಕುರ್ಜಿನ ಆರತಿಗಳೊಂದಿಗೆ ದೇವರುಗಳ ಮೂರ್ತಿಯನ್ನು ಗ್ರಾಮಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮಧ್ಯಾಹ್ನದ ವೇಳೆಗೆ ಹರಕೆ ಹೊತ್ತ ಭಕ್ತಾಧಿಗಳಿಗೆ ಮುಡಿ ತಗೆಯುವ ಕಾರ್ಯ ನಡೆಯಿತು. 3 ಗಂಟೆಗೆ ಬಾಯಿಬೀಗ ನಂತರ ಕುರ್ಜು ರಥೋತ್ಸವದ (ತೇರು) ಮೆರವಣಿಗೆಯು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿತು. ಭಕ್ತಾಧಿಗಳಿಗೆ ಮುಂಜಾನೆಯಿಂದಲೇ ಅಕ್ಕಪಕ್ಕದ ಗ್ರಾಮಗಳ ಮುಖಂಡರು ಪಾನಕ, ಮಜ್ಜಿಗೆ ಮತ್ತು ಪ್ರಸಾದ ವಿನಿಯೋಗವನ್ನು ಏರ್ಪಡಿಸಿದ್ದರು. ಬೆಂಗಳೂರು ಸೇರಿದಂತೆ ನಾನಾ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿಗೆ ಪೂಜೆಸಲ್ಲಿಸಿ ತಮ್ಮ ಭಕ್ತಿಭಾವ ಸಮರ್ಪಿಸಿದರು.



ಅವಸರದಮ್ಮ ದೇವಿಯ ಅಗ್ನಿಕೊಂಡ ಮಹೋತ್ಸವವನ್ನು ಕೆಲವು ಕಟ್ಟುನಿಟ್ಟಿನ ಶಿಸ್ತುಪಾಲನೆಯಿಂದ 4 ದಿನಗಳ ಕಾಲ ಆಚರಣೆ ಮಾಡಲಾಗುತ್ತದೆ. ಬಿಡದಿ ಹೋಬಳಿಯ ಸುಮಾರು 33 ಹಳ್ಳಿಗಳ ಗ್ರಾಮಸ್ಥರು ಸೇರಿ ಆಚರಿಸುವುದರಿಂದ ಇದೊಂದು ದೊಡ್ಡ ಹಬ್ಬವೆಂದು ಹೆಸರಾಗಿದೆ. ಪ್ರತಿವರ್ಷ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ನಡೆಯುವ ಈ ನಾಡದೇವತೆ ಹಬ್ಬದಲ್ಲಿ ಸಾವಿರಾರು ಜನ ಭಕ್ತರು, ನೆಂಟರಿಷ್ಟರು ಪಾಲ್ಗೊಂಡು ಸಂಭ್ರಮಿಸುವುದು ವಿಶೇಷ.

ಹಂಪಾಪುರದ ಬಸವೇಶ್ವರ, ಮುತ್ತುರಾಯ ಸೋಮವಾರ ಮಧ್ಯಾಹ್ನ ಅವರಸದಮ್ಮ ದೇವಿಯ ಉತ್ಸವ ಮೂರ್ತಿಯನ್ನು 3 ತೇರುಗಳಲ್ಲಿ ತಾಳಕುಪ್ಪೆ ಮತ್ತು ಚಿನ್ನೇಗೌಡನದೊಡ್ಡಿ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಮಂಗಳವಾರ ರಾತ್ರಿ 10ಗಂಟೆಗೆ ನಡೆಯುವ ಅಮ್ಮನವರ ಮರುಪೂಜೆಯ ಮುಖೇನ 4 ದಿನಗಳ ಹಬ್ಬದಾಚರಣೆ ಹಾಗೂ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

01/04/2026 ಭಾರತ ಸಾರಥಿ BHARATHA SARATHI KANNADA DAILY NEWS PAPER



# ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ

ಕೆಜಿಎಫ್

ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಬಲೀಕರಣ ಹಾಗೂ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಗರದ ಮಂಜುನಾಥ ನಗರದಲ್ಲಿ 'ರಕ್ಷಾ ಚಾರಿಟೇಬಲ್ ಟ್ರಸ್ಟ್' ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮವು ಅರ್ಥಪೂರ್ಣವಾಗಿ ಜರುಗಿತು.




ಕಾರ್ಯಕ್ರಮದಲ್ಲಿ ಟ್ರಸ್ಟ್ ವತಿಯಿಂದ ಆರು ತಿಂಗಳ ಕಾಲ ಹೊಲಿಗೆ ತರಬೇತಿ ಪಡೆದಿದ್ದ 30ಕ್ಕೂ ಹೆಚ್ಚು ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು. ಈ ವೇಳೆ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಶುಭಾಕರ್, "ಕೇವಲ ತಾತ್ಕಾಲಿಕ ಸಹಾಯ ಮಾಡುವುದು ನಮ್ಮ ಉದ್ದೇಶವಲ್ಲ. ಪ್ರತಿಯೊಬ್ಬ ಮಹಿಳೆಯೂ ಆರ್ಥಿಕವಾಗಿ ಸ್ವಾವಲಂಬಿಯಾಗಿ, ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಬೇಕು ಎಂಬುದು ನಮ್ಮ ಗುರಿ" ಎಂದು ತಿಳಿಸಿದರು.

ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಯಾವುದೇ ಅಡ್ಡಿಯಾಗಬಾರದು ಎಂಬ ಆಶಯದೊಂದಿಗೆ, ನೂರಾರು ಶಾಲಾ ಮಕ್ಕಳಿಗೆ ಬ್ಯಾಗ್, ನೋಟ್ ಪುಸ್ತಕಗಳು ಹಾಗೂ ಪೆನ್ ಸೇರಿದಂತೆ ಅಗತ್ಯ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು. ದಾನಿಗಳಾದ ಕವಿತಾ ಮತ್ತು ಗ್ರೈನ್ ಸೈಟ್ ಸಂಸ್ಥೆಯ ಸಹಯೋಗದೊಂದಿಗೆ ಈ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳು, ಗಣ್ಯರು ಹಾಗೂ ನೂರಾರು ಮಹಿಳೆಯರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# 'ಅಪಾಯಕಾರಿಯಾಗಿರುವ ಕಾಲುವೆಗೆ ತಡೆಗೋಡೆ ನಿರ್ಮಿಸಿ'

ವಿಜಯಪುರ

ಪಟ್ಟಣದ ಯಲ್ಲಮ್ಮದೇವಾಲಯದ ಕಡೆಯಿಂದ ಮೇಲೂರಿನ ಕಡೆಗೆ ಸಂಚರಿಸುವ ರಸ್ತೆಯ ನಡುವೆ ಹಾದು ಹೋಗುವ ಕಾಲುವೆಯು ಅಪಾಯಕಾರಿಯಾಗಿದ್ದು, ಕಾಲುವೆಯಿರುವ ಬಗ್ಗೆ ಎಚ್ಚರಿಕೆಯ ಫಲಕ ಅಳವಡಿಸಬೇಕು, ಅದಕ್ಕೆ ತಡೆಗೋಡೆಯನ್ನು ನಿರ್ಮಾಣ ಮಾಡಬೇಕಿದೆ.



ರಸ್ತೆಯ ಪಕ್ಕದಲ್ಲೆ, ಕಸದ ರಾಶಿ ಹಾಕಿದ್ದಾರೆ. ಇಲ್ಲೆ ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಕಸ ಹೆಚ್ಚಿನ ಪ್ರಮಾಣದಲ್ಲಿ ಹಾಕಿ, ಗಿಡಗಂಟಿಗಳು ಬೆಳೆದು ನಿಂತಿರುವುದರಿಂದ ದೊಡ್ಡಮೋರಿಯ ಕಡೆಯಿಂದ ಹಾಗೂ ದೇವಾಲಯದ ಕಡೆಯಿಂದ ವೇಗವಾಗಿ ಬರುವ ವಾಹನ ಸವಾರರಿಗೆ, ಕಾಲುವೆ ಇರುವುದನ್ನು ಗುರುತಿಸುವುದು ಕಷ್ಟವಾಗಿದ್ದು, ವಾಹನಗಳು ಚಾಲನೆ ಮಾಡಿಕೊಂಡು ಬರುವಾಗ, ಆಯತಪ್ಪಿ, ಕಾಲುವೆಗೆ ಉರುಳಿ ಬೀಳುವ ಸಾಧ್ಯತೆ ಹೆಚ್ಚಾಗಿದೆ ಕಾಲುವೆ ಇರುವ ಕಡೆ ರಸ್ತೆ ಕಿರಿದಾಗಿದೆ. ಒಂದು ವಾಹನ ಬಂದರೆ ಮತ್ತೊಂದು ವಾಹನ ಹೋಗುವುದಕ್ಕೆ ಆಗಲ್ಲ. ಈ ರಸ್ತೆಯಲ್ಲೆ, ಮೋರಿಯ ಕಡೆಯಿಂದ ಬರುವ ರಸ್ತೆಗೆ ಎದುರಾಗಿರುವ ಕಾಲುವೆಯು ಅಪಾಯಕಾರಿಯಾಗಿದೆ. ರಾತ್ರಿಯ ವೇಳೆ ಕಾರುಗಳು ಉರುಳಿ ಬಿದ್ದಿವೆ. ಆದ್ದರಿಂದ ಪುರಸಭೆಯವರು, ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು. ತಡೆಗೋಡೆಯನ್ನು ನಿರ್ಮಾಣ ಮಾಡಿ, ಮುಂದೆ ಆಗಬಹುದಾದ ಅಪಾಯವನ್ನು ತಪ್ಪಿಸಬೇಕು ಎಂದು ಸ್ಥಳೀಯ ರೈತರು, ಸಾರ್ವಜನಿಕರು ಒತ್ತಾಯಿಸಿದ್ದಾರೆ.

# *ಮೇ 15ರಂದು ಜನಸಂಪರ್ಕ ಸಭೆ; ಅಹವಾಲು ಸ್ವೀಕಾರ*


*ದೇವನಹಳ್ಳಿ*

*ಸಾರ್ವಜನಿಕರ ದೂರುಗಳನ್ನು ಆಲಿಸಲು ಮತ್ತು ಸರ್ಕಾರಿ ಕಚೇರಿಗಳಲ್ಲಿನ ದುರಾಡಳಿತಕ್ಕೆ ಕಡಿವಾಣ ಹಾಕಲು ಕರ್ನಾಟಕ ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ವತಿಯಿಂದ ಮೇ 15ರಂದು ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಟೌನ್ ಪ್ರವಾಸಿ ಮಂದಿರದಲ್ಲಿ ಜನಸಂಪರ್ಕ ಹಾಗೂ ಅಹವಾಲು ಸ್ವೀಕಾರ ಸಭೆಯನ್ನು ಆಯೋಜಿಸಲಾಗಿದೆ.*

*ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಪವನ್ ನೆಜ್ಜೂರ್ ಅವರ ನೇತೃತ್ವದಲ್ಲಿ ಈ ಸಭೆ ನಡೆಯಲಿದ್ದು, ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳ ಗಮನಕ್ಕೆ ತರಬಹುದಾಗಿದೆ.*

*ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡಿಕೊಡಲು ಅನಗತ್ಯ ವಿಳಂಬ, ಅಧಿಕಾರಿಗಳ ನಿರ್ಲಕ್ಷ್ಯ, ಅಧಿಕಾರ ದುರುಪಯೋಗ ಅಥವಾ ದುರಾಡಳಿತದಂತಹ ಪ್ರಕರಣಗಳಿದ್ದಲ್ಲಿ ಸಾರ್ವಜನಿಕರು ಲಿಖಿತ ರೂಪದಲ್ಲಿ ದೂರು ಸಲ್ಲಿಸಬಹುದು. ಭ್ರಷ್ಟಾಚಾರ ಅಥವಾ ಸಿಬ್ಬಂದಿಗಳ ಕಿರುಕುಳದ ಬಗ್ಗೆಯೂ ಅಹವಾಲುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ದೂರು ನೀಡಲಿಚ್ಛಿಸುವ ಸಾರ್ವಜನಿಕರು ಮೇ 15 ರಂದು ವಿಜಯಪುರ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ, ತಮ್ಮ ಲಿಖಿತ ದೂರನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಸಾರ್ವಜನಿಕರು ಈ ಸಭೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಕೋರಿದ್ದಾರೆ.*

# ಶ್ರೇಯಸ್‌ಗೆ ಅಂತರರಾಷ್ಟ್ರೀಯ ಬುಕ್ ಆಫ್ ರೆಕಾರ್ಡ್ ಗೌರವ



ಕೋಲಾರ

ಜಿಲ್ಲೆಯ ಯುವ ಪ್ರತಿಭೆ ದುಗ್ಗರಾಜ್ ಶ್ರೇಯಸ್ ಎ.ಪಿ. ಅವರು ಇಂಗ್ಲಿಷ್ ಭಾಷೆಯಲ್ಲಿ ರಚಿಸಿರುವ 'ಓಂ ನಮೋ ನರಸಿಂಹ' ಎಂಬ ಭಕ್ತಿಗೀತೆಗೆ ಪ್ರತಿಷ್ಠಿತ 'ಅಂತರರಾಷ್ಟ್ರೀಯ ಬುಕ್ ಆಫ್ ರೆಕಾರ್ಡ್' ಗೌರವ ಲಭಿಸಿದೆ.

ನಗರದ ಮಲ್ಲಿಕಾ ಕ್ಯಾಸೆಟ್ ಸೆಂಟರ್‌ನ ಮಲ್ಲಿಕಾ ಪ್ರಕಾಶ್ ಅವರ ಪುತ್ರರಾಗಿರುವ ಶ್ರೇಯಸ್, ಈಗಾಗಲೇ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರು ರಚಿಸಿರುವ ಈ ವಿಶಿಷ್ಟ ಇಂಗ್ಲಿಷ್ ಗೀತೆಯು ಯೂಟ್ಯೂಬ್‌ನಲ್ಲಿ ಲಭ್ಯವಿದ್ದು, ಜಾಗತಿಕ ಮಟ್ಟದಲ್ಲಿ ಗಮನ ಸೆಳೆದ ಹಿನ್ನೆಲೆಯಲ್ಲಿ ಈ ವಿಶ್ವ ದಾಖಲೆಯ ಗೌರವ ಸಂದಿದೆ.

ಶ್ರೇಯಸ್ ಅವರು ಈ ಹಿಂದೆ ತಾವು ರಚಿಸಿದ್ದ ವಿವಿಧ ಗೀತೆಗಳಿಗೆ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್' ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ಇದೀಗ ಲಭಿಸಿರುವ ಅಂತರರಾಷ್ಟ್ರೀಯ ಬುಕ್ ಆಫ್ ರೆಕಾರ್ಡ್ ವಿಶ್ವದ ಅತ್ಯಂತ ಪ್ರತಿಷ್ಠಿತ ಗೌರವಗಳಲ್ಲಿ ಒಂದಾಗಿದೆ. "ಈ ಪ್ರಶಸ್ತಿ ಬರಲು ಕಾರಣವಾದ ನನ್ನ ಹಾಡಿನ ಚಿತ್ರೀಕರಣದಲ್ಲಿ ಸಹಕರಿಸಿದ ಸ್ನೇಹಿತರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ" ಎಂದು ತಿಳಿಸಿದ್ದಾರೆ.

# ಉಮೇಶ್ ಮೇಟಿ ಪರ ಬೈರತಿ ಸುರೇಶ್ ಬಿರುಸಿನ ಮತ ಯಾಚನೆ

ಬಾಗಲಕೋಟೆ

ಏಪ್ರಿಲ್ 9 ರಂದು ನಡೆಯುವ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಅವರು ಮಂಗಳವಾರ ಬಾಗಲಕೋಟೆಯ ವಿವಿಧ ಬಡಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ ಬಿರುಸಿನ ಪ್ರಚಾರ ನಡೆಸಿದರು.

ವಿದ್ಯಾಗಿರಿ ಸೇರಿ ಹಲವೆಡೆ ಮನೆ ಮನೆಗೆ ತೆರಳಿ ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಮತ್ತು ಸುತ್ತಮುತ್ತಲಿನ ಜನರು ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಬೇಕೆಂಬ ಬೇಡಿಕೆ ಇಡುತ್ತಲೇ ಬಂದಿದ್ದರು. ಹಿಂದಿನ ಬಿಜೆಪಿ ಸರ್ಕಾರ ಈ ಬಗ್ಗೆ ನಿರ್ಲಕ್ಷ್ಯ ವಹಿಸಿತ್ತು. ಆದರೆ, ಎಚ್ ವೈ ಮೇಟಿ ಅವರು ಶಾಸಕರಾಗಿ ಬಾಗಲಕೋಟೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿಸುವಲ್ಲಿ ಯಶಸ್ವಿಯಾಗಿದ್ದರು ಎಂದು ಹೇಳಿದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಲವಾರು ಭಾಗ್ಯಗಳನ್ನು ರಾಜ್ಯದ ಜನತೆಗೆ ನೀಡಿದ್ದಲ್ಲದೇ, ಕಳೆದ ಮೂರು ವರ್ಷಗಳಿಂದ ಪಂಚ ಗ್ಯಾರಂಟಿ ಕಾರ್ಯಕ್ರಮಗಳನ್ನೂ ನೀಡುವ ಮೂಲಕ ಲಕ್ಷಾಂತರ ಬಡ ಕುಟುಂಬಗಳಿಗೆ ಆರ್ಥಿಕವಾಗಿ ಸಬಲರನ್ನಾಗಿ ಮಾಡಿದ್ದಾರೆ ಎಂದು ತಿಳಿಸಿದರು. ಎಚ್ ವೈ ಮೇಟಿ ಅವರು ಶಾಸಕರಾಗಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕಾಯಾ ವಾಚಾ ಶ್ರಮಿಸಿದ್ದಾರೆ.

# ಯಶಸ್ವಿಯಾಗಿ ಮುಕ್ತಾಯಗೊಂಡ ಎಸ್‌ಎಸ್‌ಎಲ್‌ಸಿ ಗಣಿತ ಪರೀಕ್ಷೆ

ಕೋಲಾರ

ಜಿಲ್ಲೆಯ 65 ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಗಣಿತ ವಿಷಯದ 4ನೇ ದಿನದ ಪರೀಕ್ಷೆ ಶನಿವಾರ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಅತ್ಯಂತ ಯಶಸ್ವಿಯಾಗಿ ನಡೆದಿದ್ದು 209 ವಿದ್ಯಾರ್ಥಿಗಳು ಗೈರಾಗಿದ್ದಾರೆ ಎಂದು ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್ ತಿಳಿಸಿದರು.


ಪರೀಕ್ಷೆ ಮುಗಿದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಗಣಿತ ಪರೀಕ್ಷೆಗೆ ಹೆಸರು ನೊಂದಾಯಿಸಿದ್ದ 18956 ಹೊಸ ವಿದ್ಯಾರ್ಥಿಗಳ ಪೈಕಿ 18747 ಮಂದಿ ಹಾಜರಾಗಿದ್ದು, 209 ಮಂದಿ ಗೈರಾಗಿದ್ದರು. ಪರೀಕ್ಷೆ ಯಾವುದೇ ಗೊಂದಲಗಳಿಲ್ಲದೇ ಸುಗಮವಾಗಿ ನಡೆದಿದ್ದು, ಶೇ.98.90 ಹಾಜರಿ ಇದೆ ಎಂದು ತಿಳಿಸಿದರು.



ಸಿಸಿ ಕ್ಯಾಮರಾ,ವೆಬ್ ಕಾಸ್ಟಿಂಗ್ ಕಣ್ಗಾವಲಿನಲ್ಲಿ ನಡೆಯುತ್ತಿರುವ 4ನೇ ವರ್ಷದ ಪರೀಕ್ಷೆ ಇದಾಗಿದ್ದು, ಜಿಲ್ಲೆಯ ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮಾರ ಸುಸ್ಥಿತಿಯಲ್ಲಿಡಲಾಗಿದೆ. ಪರೀಕ್ಷಾ ಅವಧಿಯಲ್ಲಿ ವೆಬ್ ಕಾಸ್ಟಿಂಗ್ ಮೂಲಕ ಅಧಿಕಾರಿಗಳು ವೀಕ್ಷಿಸುತ್ತಿದ್ದು, ಯಾವುದೇ ಲೋಪ ಕಂಡು ಬರಲಿಲ್ಲ ಎಂದರು.

ಬಂಗಾರಪೇಟೆ ತಾಲ್ಲೂಕಿನ 8 ಕೇಂದ್ರಗಳಲ್ಲಿ ಗಣಿತ ವಿಷಯಕ್ಕೆ 2538 ಮಂದಿ ನೊಂದಾಯಿಸಿದ್ದು, 2517 ಮಂದಿ ಹಾಜರಾಗಿ 21 ಮಂದಿ ಗೈರಾಗಿದ್ದಾರೆ, ಕೆಜಿಎಫ್ ತಾಲ್ಲೂಕಿನ 9 ಕೇಂದ್ರಗಳಲ್ಲಿ 3243 ಮಕ್ಕಳು ಹೆಸರು ನೊಂದಾಯಿಸಿದ್ದು, 3208 ಮಂದಿ ಹಾಜರಾಗಿ 35 ಮಂದಿ ಗೈರಾಗಿದ್ದಾರೆ. ತಾಲ್ಲೂಕಿನ 18 ಕೇಂದ್ರಗಳಲ್ಲಿ 4733 ಮಂದಿ ಹೆಸರು ನೊಂದಾಯಿಸಿದ್ದು, 4789 ಮಂದಿ ಹಾಜರಾಗಿ 44 ಮಂದಿ ಗೈರಾಗಿದ್ದಾರೆ. ಮಾಲೂರು ತಾಲ್ಲೂಕಿನ 8 ಕೇಂದ್ರಗಳಲ್ಲಿ 2974 ಮಂದಿ ಹೆಸರು ನೊಂದಾಯಿಸಿದ್ದು, 2939 ಮಂದಿ ಹಾಜರಾಗಿದ್ದು, 35 ಮಂದಿ ಗೈರಾಗಿದ್ದಾರೆ. ಮುಳಬಾಗಿಲು ತಾಲ್ಲೂಕಿನ 12 ಕೇಂದ್ರಗಳಲ್ಲಿ 2812 ಮಂದಿ ನೊಂದಾಯಿಸಿದ್ದು, 2760 ಮಂದಿ ಹಾಜರಾಗಿದ್ದು, 52 ಮಂದಿ ಗೈರಾಗಿದ್ದಾರೆ, ಶ್ರೀನಿವಾಸಪುರ ತಾಲ್ಲೂಕಿನ 10 ಕೇಂದ್ರಗಳಲ್ಲಿ 2556 ಮಂದಿ ಹೆಸರು ನೊಂದಾಯಿಸಿದ್ದು, 2534 ಮಂದಿ ಹಾಜರಾಗಿದ್ದು, 22 ಮಂದಿ ಗೈರಾಗಿದ್ದಾರೆ. ನಾಲ್ಕನೇ ದಿನದ ಪರೀಕ್ಷೆಯಲ್ಲಿ ಜಿಲ್ಲಾದ್ಯಂತ ಎಲ್ಲೂ ಯಾವುದೇ ಅವ್ಯವಹಾರಗಳು ನಡೆದ ಬಗ್ಗೆ ವರದಿಯಾಗಿಲ್ಲ, ಪರೀಕ್ಷೆ ಸುಗಮವಾಗಿ ನಡೆಸುವಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ, ಎಸ್ಪಿ ಅವರ ಮಾರ್ಗದರ್ಶನದಲ್ಲಿ ಜಿಲ್ಲಾಡಳಿತ, ಶಿಕ್ಷಣ ಇಲಾಖೆ, ಶಿಕ್ಷಕರು,ಪೋಷಕರು, ವಿದ್ಯಾರ್ಥಿಗಳು ಸಹಕಾರ ನೀಡಿದ್ದಾರೆ ಎಂದರು. ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್, ಶಿಕ್ಷಣಾಧಿಕಾರಿ ಡಾ. ವೀಣಾ, ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಶಂಕರೇಗೌಡ, ಡಿವೈಪಿಸಿಗಳಾದ ರಾಜೇಶ್ವರಿ, ಸೈಹಿದಾ ನಾಹಿದಾ ಫಾತಿಮಾ, ಬಿಇಓಗಳಾದ ಮಧುಮಾಲತಿ ಪಡುವಣೆ, ವಿವಿಧ ತಾಲ್ಲೂಕುಗಳ ಬಿಇಓಗಳಾದ ಶಶಿಕಲಾ, ನಾರಾಯಣಸ್ವಾಮಿ, ಕೆಂಪಯ್ಯ, ರಾಮಚಂದ್ರ, ಮುನಿಲಕ್ಷ್ಮಯ್ಯ, ಎವೈಪಿಸಿ ಗಾಯತ್ರಿ, ವಿಷಯ ಪರಿವೀಕ್ಷಕರಾದ ಸಮೀವುಲ್ಲಾ, ಕ್ರಿಸ್ಟಿನಾಬಬಿತಾ,ತಾಲ್ಲೂಕು ನೋಡಲ್ ಅಧಿಕಾರಿ ಇಸಿಓ ರಾಧಾ ಮತ್ತಿತರರು ವಿವಿಧ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಗರದ ಅಂಜುಮಾನ್ ಶಾಲೆ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರಾಗಿ ವೇಣುಗೋಪಾಲ್, ಪ್ರಶ್ನೆಪತ್ರಿಕಾ ಪಾಲಕರಾಗಿ ಮಂಜುಳಾ, ಸ್ಥಾನಿಕ ಜಾಗೃತದಳ ಅಧಿಕಾರಿಯಾಗಿ ಗಂಗಾಧರಮೂರ್ತಿ ಕಾರ್ಯನಿರ್ವಹಿಸಿದರು.

# ಪೇದೆಗೆ ಸಿಎಂ ಪದಕ!



ಬಂಗಾರಪೇಟೆ

ಪಟ್ಟಣದ ರೈಲ್ವೆ ಪೊಲೀಸ್ ಠಾಣೆಯ ಮುಖ್ಯಪೇದೆ ಬಿ.ವಿ. ಅಶೋಕ್ (ಹೆಚ್‌ಸಿ–160) ಅವರು 2025ನೇ ಸಾಲಿನ ಅತ್ಯುನ್ನತ 'ಮುಖ್ಯಮಂತ್ರಿ ಪದಕ'ಕ್ಕೆ ಭಾಜನರಾಗುವ ಮೂಲಕ ತಾಲ್ಲೂಕು ಹಾಗೂ ಪೊಲೀಸ್ ಇಲಾಖೆಯ ಕೀರ್ತಿಯನ್ನು ರಾಜ್ಯಮಟ್ಟದಲ್ಲಿ ಹೆಚ್ಚಿಸಿದ್ದಾರೆ.

ರಾಜ್ಯ ಸರ್ಕಾರವು ಅಧಿಕೃತವಾಗಿ ಘೋಷಿಸಿರುವ ಸೇವಾ ಪದಕಗಳ ಪಟ್ಟಿಯಲ್ಲಿ ಅಶೋಕ್ ಅವರ ಹೆಸರು ಪ್ರಕಟವಾಗಿದ್ದು, ಇವರ ಶಿಸ್ತು, ದಕ್ಷತೆ ಮತ್ತು ಕಳಂಕರಹಿತ ಸೇವೆಯನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ.

ಏಪ್ರಿಲ್ 2 ರಂದು ಪದಕ ಪ್ರದಾನ: ಬೆಂಗಳೂರಿನಲ್ಲಿ ಏಪ್ರಿಲ್ 2ರಂದು ನಡೆಯಲಿರುವ ಅದ್ದೂರಿ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಪದಕ ಪ್ರಧಾನ ಮಾಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಇದೇ 29 ರಿಂದಲೇ ಬೆಂಗಳೂರಿನ ಕೆಎಸ್‌ಆರ್‌ಪಿ 3ನೇ ಪಡೆ ಮೈದಾನದಲ್ಲಿ ಪೂರ್ವಾಭ್ಯಾಸ ಆರಂಭವಾಗಿದ್ದು, ಅಶೋಕ್ ಅವರು ಅದರಲ್ಲಿ ಪಾಲ್ಗೊಂಡಿದ್ದಾರೆ.

ಸತತ ಎರಡನೇ ಬಾರಿ ಸಂದ ಗೌರವ: ಮುಖ್ಯಪೇದೆ ಅಶೋಕ್ ಅವರಿಗೆ ಇದು ಸತತ ಎರಡನೇ ವರ್ಷದ ಸಂಭ್ರಮ. ಕಳೆದ ವರ್ಷವಷ್ಟೇ ಇಲಾಖಾ ಮಟ್ಟದ ಪ್ರತಿಷ್ಠಿತ 'ಡಿಜಿ ಡಿಸ್ಕ್' ಪದಕವನ್ನು ಪಡೆದಿದ್ದ ಇವರು, ಈ ವರ್ಷ ರಾಜ್ಯಮಟ್ಟದ ಉನ್ನತ ಗೌರವವಾದ ಮುಖ್ಯಮಂತ್ರಿ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ರೈಲ್ವೆ ಸುರಕ್ಷತೆ, ಅಪರಾಧ ಪತ್ತೆ ಮತ್ತು ಸಾರ್ವಜನಿಕ ಸೇವೆಯಲ್ಲಿ ಅವರು ತೋರುತ್ತಿರುವ ದಕ್ಷತೆಯೇ ಈ ಸಾಲು ಸಾಲು ಪ್ರಶಸ್ತಿಗಳಿಗೆ ಸಾಕ್ಷಿಯಾಗಿದೆ.

ಠಾಣೆಯಲ್ಲಿ ಹಬ್ಬದ ವಾತಾವರಣ: ತಮ್ಮ ಸಹೋದ್ಯೋಗಿಗೆ ರಾಜ್ಯಮಟ್ಟದ ಗೌರವ ಲಭಿಸಿರುವುದು ಬಂಗಾರಪೇಟೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಸಂಭ್ರಮಕ್ಕೆ ಕಾರಣವಾಗಿದೆ. "ಅಶೋಕ್ ಅವರ ಕರ್ತವ್ಯ ನಿಷ್ಠೆ ಇಡೀ ತಂಡಕ್ಕೆ ಮಾದರಿ. ಈ ಪದಕವು ಕೇವಲ ವ್ಯಕ್ತಿಯೊಬ್ಬರಿಗೆ ಸಂದ ಗೌರವವಲ್ಲ, ನಮ್ಮ ಇಡೀ ಠಾಣೆಗೆ ಸಂದ ಗೌರವ," ಎಂದು ಸ್ಥಳೀಯ ರೈಲ್ವೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಕೋಲಾರದಿಂದ ಸಿದ್ಧಗಂಗಾ ಮಠಕ್ಕೆ ಎರಡು ಲಾರಿ ದಿನಸಿ ಪದಾರ್ಥ ದೇಣಿಗೆ

ಕೋಲಾರ

ತ್ರಿವಿಧ ದಾಸೋಹಿ ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರ 119ನೇ ಜನ್ಮದಿನಾಚರಣೆಯ ಅಂಗವಾಗಿ ಕೋಲಾರ ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಭಕ್ತಾಧಿಗಳು ಒಗ್ಗೂಡಿ ಎರಡು ಲಾರಿಗಳಷ್ಟು ದಿನಸಿ ವಸ್ತುಗಳನ್ನು ಮಠದ ದಾಸೋಹಕ್ಕೆ ದೇಣಿಗೆಯಾಗಿ ಕಳುಹಿಸಿಕೊಟ್ಟಿದ್ದಾರೆ.



ನಗರದ ಡೂಮ್ ಲೈಟ್ ವೃತ್ತದಲ್ಲಿ ದಿನಸಿ ಹಾಗೂ ತರಕಾರಿ ತುಂಬಿದ ಲಾರಿಗಳಿಗೆ ಚಾಲನೆ ನೀಡಲಾಯಿತು. ಕಳೆದ 10 ವರ್ಷಗಳಿಂದಲೂ ನಿರಂತರವಾಗಿ ಕೋಲಾರ ನಗರ, ಕಳ್ಳೀಪುರ, ವೇಮಗಲ್, ನರಸಾಪುರ, ರಾಮಸಂದ್ರ ಸೇರಿದಂತೆ ವಿವಿಧ ಗ್ರಾಮಗಳಿಂದ ದವಸ ಧಾನ್ಯಗಳನ್ನು ಸಂಗ್ರಹಿಸಿ ಮಠಕ್ಕೆ ತಲುಪಿಸುವ ಕಾಯಕವನ್ನು ಭಕ್ತರು ಮುಂದುವರಿಸಿಕೊಂಡು ಬಂದಿದ್ದಾರೆ.

ಈ ಬಾರಿ ಭಕ್ತರಿಂದ ಸಂಗ್ರಹಿಸಲಾದ ಆರುವರೆ ಟನ್ ತರಕಾರಿ, 230 ಮೂಟೆ ಬೆಲ್ಲ, 105 ಮೂಟೆ ಅಕ್ಕಿ, 510 ಕೆಜಿ ಹೆಸರುಬೇಳೆ, ಉಪ್ಪು, ರವೆ ಸೇರಿದಂತೆ ಬೃಹತ್ ಪ್ರಮಾಣದ ದಿನಸಿ ಪದಾರ್ಥಗಳನ್ನು ಮಠಕ್ಕೆ ರವಾನಿಸಲಾಗಿದೆ. ಎಪಿಎಂಸಿ ಮಾರುಕಟ್ಟೆಯ ವರ್ತಕರು ಮತ್ತು ರೈತರು ಈ ಪುಣ್ಯಕಾರ್ಯಕ್ಕೆ ಕೈಜೋಡಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ ಅಣ್ಣಿಹಳ್ಳಿ ನಾಗರಾಜ್, "ಕಾಯಕ ಯೋಗಿ ಶಿವಕುಮಾರ ಶ್ರೀಗಳ ಜನ್ಮದಿನವನ್ನು ಜಾತ್ಯತೀತವಾಗಿ, ಧರ್ಮಾತೀತವಾಗಿ ಎಲ್ಲರೂ ಆಚರಿಸುತ್ತಾರೆ. ಅವರು ತೋರಿದ ತ್ರಿವಿಧ ದಾಸೋಹದ ಮಾರ್ಗದಲ್ಲಿ ಸಾಗುವುದು ನಮ್ಮ ಬದುಕಿನ ಸಾರ್ಥಕತೆ. ಕೋಲಾರದ ಭಕ್ತರು ಪ್ರತಿ ವರ್ಷದಂತೆ ಈ ಬಾರಿಯೂ ಶ್ರೀಗಳ ಜನ್ಮದಿನದ ಅಂಗವಾಗಿ ದಾಸೋಹಕ್ಕೆ ನೆರವಾಗುತ್ತಿದ್ದಾರೆ" ಎಂದರು.

ಏಪ್ರಿಲ್ 1 ರಂದು ಶ್ರೀಗಳ ಜನ್ಮದಿನದಂದು ಮಠಕ್ಕೆ ತೆರಳಲು ಭಕ್ತರಿಗಾಗಿ ಮಾಜಿ ನಗರಸಭೆ ಸದಸ್ಯ ಪ್ರಸಾದ್ ಬಾಬು ಮತ್ತು ಕಳ್ಳೀಪುರ ನಾಗರಾಜ್ ಉಚಿತ ವಾಹನ ವ್ಯವಸ್ಥೆ ಕಲ್ಪಿಸಿದ್ದಾರೆ. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯ ರಾಕೇಶ್, ಡೂಮ್ ಲೈಟ್ ಸರ್ಕಲ್ ಸಿಆರ್ ಶೇಖರ್ ಸೇರಿದಂತೆ ಮಠದ ಹಲವಾರು ಭಕ್ತಾಧಿಗಳು ಪಾಲ್ಗೊಂಡಿದ್ದರು.

# ಸಡಗರದಿಂದ ನಡೆದ

## ಶ್ರೀ ಪಟಾಲಮ್ಮದೇವಿ ರಥೋತ್ಸವ

ಶಿಡ್ಲಘಟ್ಟ

ತಾಲ್ಲೂಕಿನ ವರದನಾಯಕನಹಳ್ಳಿ ಗ್ರಾಮದಲ್ಲಿ ಪುರಾತನ ಕಾಲದಿಂದಲೂ ಆರಾಧಿಸಿಕೊಂಡು ಬರಲಾಗುತ್ತಿರುವ ಶ್ರೀ ಪಟಾಲಮ್ಮದೇವಿ ಹಾಗೂ ಶ್ರೀ ವೀರಸೊಣ್ಣಮ್ಮದೇವಿಯವರ 30ನೇ ವರ್ಷದ ರಥೋತ್ಸವವು ಭಾನುವಾರ ಅತ್ಯಂತ ಭಕ್ತಿ ಭಾವ ಹಾಗೂ ಸಡಗರದಿಂದ ನೆರವೇರಿತು.


ರಥೋತ್ಸವದ ಅಂಗವಾಗಿ ಬೆಳಗ್ಗಿನ ಜಾವದಿಂದಲೇ ದೇವಸ್ಥಾನದಲ್ಲಿ ದೇವಿಯರಿಗೆ ವಿಶೇಷ ಅಭಿಷೇಕ, ಹೋಮ–ಹವನ ಹಾಗೂ ಪುಷ್ಪಾಲಂಕಾರದಂತಹ ಧಾರ್ಮಿಕ ವಿಧಿವಿಧಾನಗಳು ನಡೆದವು. ನಂತರ ಅಲಂಕೃತಗೊಂಡ ಉತ್ಸವ ಮೂರ್ತಿಗಳನ್ನು ಮಂಗಲ ವಾದ್ಯಗಳೊಂದಿಗೆ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ಭಕ್ತರು ಜೈಘೋಷಗಳನ್ನು ಕೂಗುತ್ತಾ ರಥವನ್ನು ಎಳೆದು ಪುನೀತರಾದರು.

ಉತ್ಸವದಲ್ಲಿ ವರದನಾಯಕನಹಳ್ಳಿ ಮಾತ್ರವಲ್ಲದೆ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಮಹಿಳೆಯರು ಪೂಜೆ ಸಲ್ಲಿಸಿ ಆರತಿ ಬೆಳಗಿದರೆ, ಯುವಕರು ತಮಟೆ ಸೇರಿದಂತೆ ವಿವಿಧ ಜನಪದ ಕಲಾತಂಡಗಳ ತಾಳಕ್ಕೆ ಹೆಜ್ಜೆ ಹಾಕುವ ಮೂಲಕ ಉತ್ಸವಕ್ಕೆ ಕಳೆ ನೀಡಿದರು. ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ ಹಾಗೂ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು. ದೇವಸ್ಥಾನದ ಆವರಣದಲ್ಲಿ ನಡೆದ ಜಾತ್ರಾ ವ್ಯಾಪಾರದಲ್ಲಿ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಸಂಜೆ ವೇಳೆ ಅಮ್ಮನವರ ಕ್ಷೀರ ಉಟ್ಲು ಮತ್ತು ಕಾಯಿ ಉಟ್ಲು ಮಹೋತ್ಸವವು ಸಡಗರದಿಂದ ಜರುಗಿತು. ಈ ಸಂದರ್ಭದಲ್ಲಿ ದೇವಸ್ಥಾನದ ಅಭಿವೃದ್ಧಿ ಸಮಿತಿಯ ಸದಸ್ಯರು, ವಿವಿಧ ಗ್ರಾಮಗಳ ಮುಖಂಡರು ಹಾಗೂ ಸಾವಿರಾರು ಭಕ್ತರು ಉಪಸ್ಥಿತರಿದ್ದು ದೇವಿಯರ ದರ್ಶನ ಪಡೆದರು.



# ಪಿಎಸ್‌ಐ ಕಿರಣ್ ಕುಮಾರ್‌ಗೆ 'ಸಿಎಂ ಪದಕ'ದ ಗರಿ



ಬಂಗಾರಪೇಟೆ

ತಾಲ್ಲೂಕಿನ ಕಾಮಸಮುದ್ರ ಪೊಲೀಸ್ ಠಾಣೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಪಿಎಸ್‌ಐ ಆಗಿ ಕಾರ್ಯನಿರ್ವಹಿಸುತ್ತಿರುವ ಬಿ.ವಿ. ಕಿರಣ್ ಕುಮಾರ್ ಅವರು ತಮ್ಮ ಅತ್ಯುತ್ತಮ ಸೇವೆಗಾಗಿ 2025ನೇ ಸಾಲಿನ ಪ್ರತಿಷ್ಠಿತ 'ಮುಖ್ಯಮಂತ್ರಿ ಪದಕ'ಕ್ಕೆ ಭಾಜನರಾಗಿದ್ದಾರೆ.

ಮೂಲತಃ ಮುಳಬಾಗಲಿನ ಮುತ್ಯಾಲಪೇಟೆ ನಿವಾಸಿಗಳಾದ ವೆಂಕಟರವಣಪ್ಪ ಹಾಗೂ ಮುನಿರತ್ನಮ್ಮ ದಂಪತಿಯ ಪುತ್ರರಾದ ಕಿರಣ್ ಕುಮಾರ್, ಪೊಲೀಸ್ ಇಲಾಖೆಯಲ್ಲಿ ಹಂತಹಂತವಾಗಿ ಬೆಳೆದು ಬಂದವರು. 2007ರಲ್ಲಿ ಬೆಂಗಳೂರು ನಗರದಲ್ಲಿ ಕಾನ್ಸ್ಟೇಬಲ್ ಆಗಿ ವೃತ್ತಿಜೀವನ ಆರಂಭಿಸಿದ ಇವರು, 2020ರಲ್ಲಿ ನೇರ ನೇಮಕಾತಿ ಮೂಲಕ ಪಿಎಸ್‌ಐ ಆಗಿ ಆಯ್ಕೆಯಾದರು. ಬಂಗಾರಪೇಟೆ, ಅನಗೊಂಡಹಳ್ಳಿ ಹಾಗೂ ತಿರುಮಲಶೆಟ್ಟಿಹಳ್ಳಿ ಠಾಣೆಗಳಲ್ಲಿ ಕಾರ್ಯನಿರ್ವಹಿಸಿರುವ ಇವರು, 2023ರಿಂದ ಕಾಮಸಮುದ್ರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಅಪರಾಧ ಪತ್ತೆಯಲ್ಲಿ ವಿಶೇಷ ಸಾಧನೆ:

3 ಪ್ರಮುಖ ಡಕಾಯಿತಿ ಪ್ರಕರಣಗಳ ಭೇದಿಸುವಿಕೆ.

9 ಸುಲಿಗೆ ಹಾಗೂ 66 ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಅಂತರ್ ರಾಜ್ಯ ಮಟ್ಟದ ಆರೋಪಿಗಳ ಪತ್ತೆ.

ಅಪಾರ ಪ್ರಮಾಣದ ಕಳವು ಮಾಲುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿ ಕಾರ್ಯಾಚರಣೆ.

ಕೇವಲ ಅಪರಾಧ ಪತ್ತೆಯಷ್ಟೇ ಅಲ್ಲದೆ, ಕಾಮಸಮುದ್ರ ಭಾಗದಲ್ಲಿ ಜನಸ್ನೇಹಿ ಆಡಳಿತ ನೀಡುವ ಮೂಲಕ ಸಾರ್ವಜನಿಕರ ವಿಶ್ವಾಸ ಗಳಿಸಿದ್ದರು. ಇವರ ಈ ಸುದೀರ್ಘ ಮತ್ತು ದಕ್ಷ ಸೇವೆಯನ್ನು ಪರಿಗಣಿಸಿದ ರಾಜ್ಯ ಸರ್ಕಾರವು 2025–26ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಇವರನ್ನು ಆಯ್ಕೆ ಮಾಡಿದೆ

# ಲೆಫ್ಟಿನೆಂಟ್ ಕರ್ನಲ್ ಅಮರನಾಥ್ ಹೆಸರಲ್ಲಿ ಪ್ರತಿ ವರ್ಷ ಬ್ಯಾಸ್ಕೆಟ್ ಬಾಲ್ ಕ್ರೀಡಾಕೂಟ

ಕೋಲಾರ

ಜಿಲ್ಲೆಯ ಹೆಮ್ಮೆಯ ಸೇನಾಧಿಕಾರಿ, ಅಂತರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಆಟಗಾರ ದಿ. ಲೆಫ್ಟಿನೆಂಟ್ ಕರ್ನಲ್ ಅಮರನಾಥ್ ಅವರ ಸ್ಮರಣಾರ್ಥ ಪ್ರತಿ ವರ್ಷ ಜಿಲ್ಲಾಮಟ್ಟದ ಬ್ಯಾಸ್ಕೆಟ್ ಬಾಲ್ ಕ್ರೀಡಾಕೂಟ ಆಯೋಜಿಸಲಾಗುವುದು ಎಂದು ಕನಕ ಬ್ಯಾಸ್ಕೆಟ್‌ಬಾಲ್ ತಂಡದ ಕಾರ್ಯದರ್ಶಿ ಅಂಚೆ ಅಶ್ವತ್ಥ್ ಘೋಷಿಸಿದರು.




ನಗರದ ಕಠಾರಿಪಾಳ್ಯ ಶಾಲಾ ಆವರಣದ ಕನಕ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಲೆಫ್ಟಿನೆಂಟ್ ಕರ್ನಲ್ ಅಮರನಾಥ್‌ರ ಎರಡನೇ ವರ್ಷದ ಸ್ಮರಣೆ ಕಾರ್ಯಕ್ರಮದಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಯಿತು. ಕಾರ್ಯಕ್ರಮವನ್ನು ಅಮರನಾಥ್ ಅವರ ಪತ್ನಿ ಜ್ಯೋತಿಶ್ರೀ ದೀಪಬೆಳಗಿಸಿ ಉದ್ಘಾಟಿಸಿದರು.

ನಿವೃತ್ತ ಯೋಧರ ಸಂಘದ ಅಧ್ಯಕ್ಷ ಜಗನ್ ಮಾತನಾಡಿ, "ಅಮರನಾಥ್ ಅವರು ಬದುಕಿದ್ದರೆ ಸೇನೆಯಲ್ಲಿ ಉನ್ನತ ಹುದ್ದೆಗೇರಿ ಜಿಲ್ಲೆಯ ನಿವೃತ್ತ ಯೋಧರಿಗೆ ಸಮರ್ಥ ನಾಯಕರಾಗುತ್ತಿದ್ದರು. ಅವರ ಅಕಾಲಿಕ ಮರಣದಿಂದ ಜಿಲ್ಲೆಯ ಕ್ರೀಡಾ ಕ್ಷೇತ್ರ ಹಾಗೂ ಯೋಧರ ಸಂಘಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಹೆಸರನ್ನು ಶಾಶ್ವತವಾಗಿ ಉಳಿಸಲು ಸಂಘವು ಸದಾ ಸಿದ್ಧವಿದೆ" ಎಂದರು. ವೇಮಗಲ್ ಬಳಿ ನಿವೃತ್ತ ಯೋಧರಿಗಾಗಿ ನಿರ್ಮಿಸುತ್ತಿರುವ ನಿವೇಶನ ಯೋಜನೆಯಲ್ಲಿ ಅಮರನಾಥ್ ಕುಟುಂಬದವರು ಪಾಲ್ಗೊಳ್ಳುವಂತೆ ಅವರು ಆಹ್ವಾನ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್ ಮಾತನಾಡಿ, ಅಮರನಾಥ್ ಅವರು ಜಿಲ್ಲೆಯ ಅಭಿವೃದ್ಧಿ ಮತ್ತು ಕ್ರೀಡೆಯ ಬಗ್ಗೆ ಅಪಾರ ಕನಸು ಕಂಡಿದ್ದರು. ಅವರ ಸ್ಮರಣಾರ್ಥ ನಗರದ ಪ್ರಮುಖ ರಸ್ತೆ ಅಥವಾ ವೃತ್ತಕ್ಕೆ ಅವರ ಹೆಸರಿಡಲು ನಗರಸಭೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್ ಮಾತನಾಡಿ, ನಿವೃತ್ತ ಯೋಧರಿಗೆ ಸಿಗಬೇಕಾದ ಸವಲತ್ತುಗಳಿಗಾಗಿ ನಡೆಯುವ ಹೋರಾಟಕ್ಕೆ ಪೂರ್ಣ ಬೆಂಬಲ ಘೋಷಿಸಿದರು.

ಅಮರನಾಥ್‌ರ ಸಹೋದರಿ ವಿಜಯಲಕ್ಷ್ಮಿ ಮಾತನಾಡಿ, ತಮ್ಮ ಸಹೋದರನ ಆಶಯದಂತೆ ಕನಕ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣಕ್ಕೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಅಮರನಾಥ್ ಅವರ ತಾಯಿ ರತ್ನಮ್ಮ, ಕುಟುಂಬದ ಸದಸ್ಯರು, ಕ್ರೀಡಾಪಟುಗಳು ಹಾಗೂ ನಿವೃತ್ತ ಯೋಧರು ಉಪಸ್ಥಿತರಿದ್ದರು.



ತಿಪಟೂರು ನಗರದ ಪ್ರಾಚೀನ ಹಾಗೂ ಐತಿಹಾಸಿಕ ಮಹತ್ವವುಳ್ಳ, ವ್ಯಾಸರಾಜ ಗುರು ಪ್ರತಿಷ್ಠಾಪಿತ ಅಂಜನೇಯ ದೇವಾಲಯದಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿಶೇಷ ಪೂಜಾ ಕಾರ್ಯಕ್ರಮಗಳು ಅತ್ಯಂತ ವಿಜೃಂಭಣೆಯಿಂದ ನೆರವೇರಿದವು. ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆದರು.

01/04/2026
# ಭಾರತ ಸಾರಥಿ
BHARATHA SARATHI KANNADA DAILY NEWS PAPER

ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com



ಖ್ಯಾತ ವಾಗ್ಮಿ ಡಾ. ಗುರುರಾಜ ಕರ್ಜಗಿ ಅವರು ಬಳ್ಳಾರಿಯ ಸಾಧನ ಯೋಗ ಕೇಂದ್ರಕ್ಕೆ ಭೇಟಿ ನೀಡಿದ ವೇಳೆ, ಲೋಕಮಾನ್ಯ ತಿಲಕರು ಬಳ್ಳಾರಿಯಲ್ಲಿ ನೀಡಿದ ಉಪನ್ಯಾಸದ ಪುಸ್ತಕವನ್ನು ಗೌರವಪೂರ್ವಕವಾಗಿ ಉಡುಗೊರೆಯಾಗಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕೇಂದ್ರದ ರೂಪಾ, ಶಂಕರ ಮಠದ ಬಿ.ಕೆ.ಬಿ.ಎನ್. ಮೂರ್ತಿ ಉಪಸ್ಥಿತರಿದ್ದರು.



ತುಮಕೂರು ಸಿದ್ದಗಂಗಾ ಮಠದಲ್ಲಿ ಏ. 1ರಂದು ನಡೆಯಲಿರುವ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವದ ಅಂಗವಾಗಿ ಸಿಹಿ ಬೂಂದಿಯನ್ನು ರಾಶಿಯಾಗಿ ಸಿದ್ಧಪಡಿಸಲಾಗಿದೆ.



ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕ ಮತ್ತು ತಾಲ್ಲೂಕು ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವನ್ನು ಪ್ರಾಂಶುಪಾಲ ಪ್ರೊ. ಕುಮಾರ್ ಕೆ.ಎಸ್. ಉದ್ಘಾಟಿಸಿದರು.



ತುಮಕೂರಿನ ಸಿದ್ದಗಂಗಾ ಮಠದಲ್ಲಿ ಏ. 1ರಂದು ನಡೆಯಲಿರುವ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವದಲ್ಲಿ ಭಾಗಿಯಾಗಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಹೆಲಿಪ್ಯಾಡ್‌ನಲ್ಲಿ ರಕ್ಷಣಾ ಇಲಾಖೆಯ ಹೆಲಿಕಾಪ್ಟರ್‌ಗಳು ರಿಹರ್ಸಲ್ ನಡೆಸಿದವು.

## ರೈತರಿಗೆ ಬಂಪರ್ ಕೊಡುಗೆ: ಬೆಳೆ ಖರೀದಿಗೆ ಕೇಂದ್ರದ ಅನುಮೋದನೆ

ನವದೆಹಲಿ

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಕರ್ನಾಟಕ, ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ 2025–26ರ ರಬಿ ಋತುವಿನ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಖರೀದಿಸಲು ಹಸಿರು ನಿಶಾನೆ ತೋರಿದ್ದಾರೆ. ಈ ನಿರ್ಧಾರದಿಂದ ಒಟ್ಟು 11,698 ಕೋಟಿ ರೂ. ಮೌಲ್ಯದ 18 ಲಕ್ಷ ಮೆಟ್ರಿಕ್ ಟನ್‌ಗೂ ಅಧಿಕ ದ್ವಿದಳ ಧಾನ್ಯ ಮತ್ತು ಎಣ್ಣೆಬೀಜಗಳನ್ನು ಬೆಲೆ ಬೆಂಬಲ ಯೋಜನೆ ಅಡಿಯಲ್ಲಿ ಸಂಗ್ರಹಿಸಲಾಗುತ್ತದೆ.



ಕರ್ನಾಟಕ ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗೆ ಸ್ಪಂದಿಸಿರುವ ಕೇಂದ್ರ ಸಚಿವರು, ರಾಜ್ಯದಲ್ಲಿ 2025–26ರ ರಬಿ ಋತುವಿನ ಕುಸುಮ್ ಬೆಳೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಅನುಮೋದಿಸಿದ್ದಾರೆ.

ಕರ್ನಾಟಕ: 6,923 ಮೆಟ್ರಿಕ್ ಟನ್ ಕುಸುಮ್ ಖರೀದಿ

ಖರೀದಿ ಪ್ರಮಾಣ: 6,923 ಮೆಟ್ರಿಕ್ ಟನ್.

ನಿಗದಿತ ಬೆಲೆ: ಪ್ರತಿ ಮೆಟ್ರಿಕ್ ಟನ್‌ಗೆ 65,400 ರೂ. ಎಂಎಸ್‌ಪಿ ನಿಗದಿಪಡಿಸಲಾಗಿದೆ.

ಒಟ್ಟು ಮೌಲ್ಯ: ಸುಮಾರು 45.27 ಕೋಟಿ ರೂ. ಮೊತ್ತದ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಸಂಗ್ರಹಿಸಲಾಗುತ್ತದೆ.

ಇತರ ರಾಜ್ಯಗಳ ವಿವರ:

ಹರಿಯಾಣ: 2,312 ಕೋಟಿ ರೂ. ಮೌಲ್ಯದ 3.73 ಲಕ್ಷ ಮೆಟ್ರಿಕ್ ಟನ್ ಸಾಸಿವೆ ಮತ್ತು ಬೇಳೆ ಖರೀದಿಗೆ ಅನುಮೋದನೆ.

ಉತ್ತರ ಪ್ರದೇಶ: 9,341 ಕೋಟಿ ರೂ. ಮೌಲ್ಯದ 14.31 ಲಕ್ಷ ಮೆಟ್ರಿಕ್ ಟನ್ ಕಡಲೆ, ಮಸೂರು ಬೇಳೆ ಮತ್ತು ಸಾಸಿವೆ ಖರೀದಿಗೆ ಸಮ್ಮತಿ.

ರೈತರಿಗೆ ಪಾರದರ್ಶಕ ಪಾವತಿ:

ಈ ಯೋಜನೆಯು ರೈತರು ತಮ್ಮ ಬೆಳೆಗಳನ್ನು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಅನಿವಾರ್ಯತೆಯನ್ನು ತಪ್ಪಿಸಲಿದೆ. ಪಿಎಫ್‌ಎಸ್ ಆಧಾರಿತ ಖರೀದಿ ವ್ಯವಸ್ಥೆ ಇರುವುದರಿಂದ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಮತ್ತು ಪಾರದರ್ಶಕವಾಗಿ ಹಣ ಪಾವತಿಯಾಗಲಿದೆ. ಎಣ್ಣೆಬೀಜ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪಕ್ಕೆ ಈ ನಿರ್ಧಾರ ಬಲ ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ.

## ಮೂಢನಂಬಿಕೆ ಮುಕ್ತ ಸಮಾಜಕ್ಕೆ ವಿಜ್ಞಾನದ ಅರಿವು ಅಗತ್ಯ

ಕೋಲಾರ

ಗ್ರಾಮೀಣ ಪ್ರದೇಶದ ಜನರಲ್ಲಿ ಜ್ಞಾನ ಮತ್ತು ವಿಜ್ಞಾನದ ಕುರಿತು ಅರಿವು ಮೂಡಿಸುವ ಸತತ ಪ್ರಯತ್ನಗಳು ನಡೆಯಬೇಕು. ವೈಜ್ಞಾನಿಕ ಚಿಂತನೆಗಳ ಮೂಲಕ ಸಮಾಜದಲ್ಲಿ ಬೇರೂರಿರುವ ಅಂಧಶ್ರದ್ಧೆ ಹಾಗೂ ಮೂಢನಂಬಿಕೆಗಳನ್ನು ನಿವಾರಿಸಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಪರಿಸರ ಚಿಂತಕ ಎಚ್.ಎ. ಪುರುಷೋತ್ತಮರಾವ್ ಕರೆ ನೀಡಿದರು.

ನಗರದ ಮುನೇಶ್ವರ ನಗರದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಸದಸ್ಯತ್ವ ಆಂದೋಲನಕ್ಕೆ ಸ್ವತಃ ಸದಸ್ಯರಾಗುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ಇಂದಿನ ವೇಗವಾಗಿ ಬೆಳೆಯುತ್ತಿರುವ ಸಮಾಜದಲ್ಲಿ ಕೇವಲ ಪರಿಸರ ಸಂರಕ್ಷಣೆ ಮಾತ್ರವಲ್ಲದೆ, ವೈಯಕ್ತಿಕ ಆರೋಗ್ಯ ಮತ್ತು ಸ್ವಚ್ಛತೆಯ ಕುರಿತು ಜನಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ನಾಗರಿಕರು ಜವಾಬ್ದಾರಿಯಿಂದ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಪುರುಷೋತ್ತಮರಾವ್ ಅಭಿಪ್ರಾಯಪಟ್ಟರು.

ನಿವೃತ್ತ ಶಿಕ್ಷಣಾಧಿಕಾರಿ ಸಿ.ಆರ್. ಅಶೋಕ್ ಮಾತನಾಡಿ, "ವಿದ್ಯಾರ್ಥಿ ಹಂತದಲ್ಲಿಯೇ ವಿಜ್ಞಾನ ಮತ್ತು ಪ್ರಾಯೋಗಿಕ ಜ್ಞಾನದ ಅರಿವು ಮೂಡಿಸಿದರೆ, ಅವರು ಮೂಢನಂಬಿಕೆಗಳಿಂದ ಹೊರಬರಲು ಸಾಧ್ಯವಾಗುತ್ತದೆ. ಸಮಾಜದ ವಿದ್ಯಾವಂತರು ಇಂತಹ ಸಂಘಟನೆಗಳ ಸದಸ್ಯರಾಗುವ ಮೂಲಕ ಜ್ಞಾನ ಪ್ರಸಾರಕ್ಕೆ ಮುಂದಾಗಬೇಕು" ಎಂದರು. ಸಮಿತಿಯ ಜಿಲ್ಲಾಧ್ಯಕ್ಷ ಜಿ. ಶ್ರೀನಿವಾಸ್ ಮಾತನಾಡಿ, ಹಳೆಯ ಸದಸ್ಯರು ತಮ್ಮ ವಾರ್ಷಿಕ ಸದಸ್ಯತ್ವವನ್ನು ನವೀಕರಿಸಿಕೊಳ್ಳುವಂತೆ ಹಾಗೂ ಹೊಸಬರು ತಾಲ್ಲೂಕು ಪ್ರತಿನಿಧಿಗಳ ಮೂಲಕ ಸದಸ್ಯತ್ವ ಪಡೆದು ವಿಜ್ಞಾನ ಜಾಗೃತಿ ಕಾರ್ಯದಲ್ಲಿ ಕೈಜೋಡಿಸುವಂತೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ರಾಜ್ಯ ಮುಖಂಡ ಕೆ.ವಿ. ಜಗನ್ನಾಥ್, ಜಿಲ್ಲಾ ಕಾರ್ಯದರ್ಶಿ ವಿ. ಮಂಜುಳಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

## ಇಂದು ಸಿದ್ದಗಂಗಾ ಮಠಕ್ಕೆ ರಾಷ್ಟ್ರಪತಿಗಳ ಭೇಟಿ

ತುಮಕೂರು

ಏ. 1ರಂದು ಸಿದ್ದಗಂಗಾ ಮಠದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಭಾಗವಹಿಸಲಿದ್ದು, ಸಂಬಂಧಿಸಿದಂತೆ ತುಮಕೂರು ನಗರದಾದ್ಯಂತ ಅಂದು ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಇರಲಿದೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ನಡೆದ ಅತಿಗಣ್ಯರ ಭದ್ರತೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಈಗಾಗಲೇ ತುಮಕೂರು ಜಿಲ್ಲೆಗೆ ಉಪರಾಷ್ಟ್ರಪತಿ, ಕೇಂದ್ರ ಗೃಹ ಸಚಿವರು, ರಾಜ್ಯಪಾಲರು ಸೇರಿದಂತೆ ಗಣ್ಯರು ಆಗಮಿಸಿದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸೂಕ್ತ ಭದ್ರತೆಯನ್ನು ಒದಗಿಸಿ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ಜರುಗಿಸಲಾಗಿದೆ. ಪ್ರಸ್ತುತ ರಾಷ್ಟ್ರಪತಿಯವರ ಕಾರ್ಯಕ್ರಮ ಅತಿಗಣ್ಯರ ಭದ್ರತೆ ಹೊಂದಿರುವುದರಿಂದ ಯಾವುದೇ ಲೋಪವಿಲ್ಲದಂತೆ ಭದ್ರತೆ ಒದಗಿಸುವ ಸಲುವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ



ಜವಾಬ್ದಾರಿ ನೀಡಿ ನಿಯೋಜನೆ ಮಾಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಭದ್ರತೆ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ. ಅಶೋಕ್ ಅವರು, ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ಅವರ ಆಗಮನದ ಹಿನ್ನೆಲೆಯಲ್ಲಿ ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲು ವ್ಯವಸ್ಥೆ ಮಾಡಲಾಗಿದೆ ಎಂದರು.

ರಾಷ್ಟ್ರಪತಿ ಅವರ ಭದ್ರತೆಗೆ ಸುಮಾರು 15,000 ಪೊಲೀಸ್ ಸಿಬ್ಬಂದಿ ನಿಯೋಜಿಸಲು ಪೊಲೀಸ್ ಇಲಾಖೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ನೀಡಿದ ಅವರು, ರಾಷ್ಟ್ರಪತಿ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮತ್ತೆ ನಿರ್ಗಮಿಸುವವರೆಗೆ ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ಮಾಡಲಾಗಿರುತ್ತದೆ. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹೆಲಿಪ್ಯಾಡ್, ವಾಹನ



ಸಂಚರಿಸುವ ರಸ್ತೆ ಮಾರ್ಗಗಳು ಹಾಗೂ ಕಾರ್ಯಕ್ರಮ ನಡೆಯುವ ಜಾಗ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ಪ್ರತ್ಯೇಕವಾದ ತಂಡಗಳನ್ನು ರಚಿಸಿ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಅಲ್ಲದೆ, ಮಾರ್ಚ್ 31ರಂದೇ ತಾಲೀಮು ಪ್ರಕ್ರಿಯೆ ಹಾಗೂ ಪೊಲೀಸ್ ಸಿಬ್ಬಂದಿಗೆ ಮಾಹಿತಿ ಹಾಗೂ ಇನ್ನಿತರ ಚಟುವಟಿಕೆಗಳನ್ನು ಪೊಲೀಸ್ ಇಲಾಖೆ ಹಮ್ಮಿಕೊಂಡಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ನಗರದಾದ್ಯಂತ ಎಲ್ಲಾ ರಸ್ತೆಗಳನ್ನು ಪೊಲೀಸ್ ಬಂದೋಬಸ್ತ್‌ನಲ್ಲಿ ಇರಿಸಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಪರ್ಯಾಯ ಮಾರ್ಗವನ್ನು ಸೂಚಿಸಲಾಗುವುದು. ಅಲ್ಲದೆ, ಕಾರ್ಯಕ್ರಮ ನಡೆಯುವ ಜಾಗಕ್ಕೆ ಸಾರ್ವಜನಿಕರು, ಭಕ್ತರು ತೆರಳಲು ಪ್ರತ್ಯೇಕ ಪ್ರವೇಶ ದ್ವಾರಗಳನ್ನು ನಿಗಧಿಗೊಳಿಸಲಾಗುವುದು ಎಂದು ಅವರು ತಿಳಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಕೇಂದ್ರ ಗುಪ್ತಚರ ಇಲಾಖೆಯ ಸುಹಾಸ್ ಸೂಡ ಅವರು, ರಾಷ್ಟ್ರಪತಿ ಕಾರ್ಯಕ್ರಮಕ್ಕೆ ಅತಿಗಣ್ಯರ ಭದ್ರತೆ ಇರುವುದರಿಂದ ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾಡಳಿತದಿಂದ ಅಧಿಕಾರಿಗಳನ್ನು ನಿಯೋಜಿಸಿ ಜವಾಬ್ದಾರಿ ವಹಿಸಿರುವುದು ಸ್ವಾಗತಾರ್ಹ. ಅಂತೆಯೇ, ಕಾರ್ಯಕ್ರಮದಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಬೇಕಿದೆ ಎಂದರು.

ರಾಜ್ಯ ಗುಪ್ತಚರ ಇಲಾಖೆಯ ಪೊಲೀಸ್ ಅಧೀಕ್ಷಕ ಸುರೇಶ್, ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ, ಸಿದ್ಧಗಂಗಾ ಮಠದ ಪ್ರತಿನಿಧಿ ಮಲ್ಲಿಕಾರ್ಜುನ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ನಂತರ ತುಮಕೂರು ವಿಶ್ವವಿದ್ಯಾನಿಲಯದ ಹೆಲಿಪ್ಯಾಡ್ ಹಾಗೂ ಸಿದ್ದಗಂಗಾ ಮಠದ ಕಾರ್ಯಕ್ರಮ ನಡೆಯುವ ವೇದಿಕೆ ಇತ್ಯಾದಿ ಪ್ರದೇಶಗಳಿಗೆ ನಿಯೋಗ ಭೇಟಿ ನೀಡಿ ಪರಿಶೀಲಿಸಿತು.

## ಪ.ಪೂ. ಗುಳವಣಿ ಮಹಾರಾಜ ದೀಕ್ಷಾ ಶತಾಬ್ದಿ ಮಹೋತ್ಸವ

ಪುಣೆ

ದತ್ತ ಪರಂಪರೆಯ ಮಹಾನ್ ಸಂತ ಹಾಗೂ ಶಕ್ತಿಪಾತ ಯೋಗದ ಪ್ರವರ್ತಕರಾದ ಪ.ಪೂ. ಗುಳವಣಿ ಮಹಾರಾಜರ ದೀಕ್ಷಾ ಶತಾಬ್ದಿ ಮಹೋತ್ಸವದ ಅಂಗವಾಗಿ, ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ ಅವರಿಗೆ ಭಕ್ತಿಪೂರ್ವಕ ಗೌರವ ಸಮರ್ಪಿಸಲಾಯಿತು.

ಡಾ. ಆಠವಲೆ ಅವರ ಅದ್ವಿತೀಯ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಪರಿಗಣಿಸಿ ಈ ಗೌರವ ನೀಡಲಾಗಿದ್ದು, ಪುಣೆಯ ಎರಂಡವಣೆಯ 'ಶ್ರೀವಾಮನ ನಿವಾಸ'ದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಅವರ ಪರವಾಗಿ ಸನಾತನ ಸಂಸ್ಥೆಯ ಸದ್ಗುರು ಸ್ವಾತಿ ಖಾಡ್ಯೆ ಅವರು



ಸನ್ಮಾನ ಸ್ವೀಕರಿಸಿದರು. ಅವರಿಗೆ ಶಾಲು, ಶ್ರೀಫಲ, ಮುತ್ತಿನ ಹಾರ ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಸಂತ ಪರಂಪರೆಯ ಅಪೂರ್ವ ಸಂಗಮ:

ಈ ಮಹೋತ್ಸವವು ಶ್ರೀವಾಸುದೇವ ನಿವಾಸ ಸ್ಥಾಪನೆಯ ವಜ್ರ ಮಹೋತ್ಸವ, ಪ.ಪೂ. ಬ್ರಹ್ಮಶ್ರೀ ಶ್ರೀದತ್ತ ಮಹಾರಾಜ ಕವೀಶ್ವರ ಪುಣ್ಯತಿಥಿಯ ರಜತ ಮಹೋತ್ಸವ ಹಾಗೂ ಪ.ಪೂ. ಯೋಗತಪಸ್ವಿ ಶ್ರೀನಾರಾಯಣಕಾಕಾ ಢೇಕಣೆ ಮಹಾರಾಜರ ಜನ್ಮ ಶತಾಬ್ದಿ ಸೇರಿದಂತೆ ಹಲವು ವಿಶೇಷ ಕಾರ್ಯಕ್ರಮಗಳಿಗೆ ಸಾಕ್ಷಿಯಾಯಿತು. ಈ ಸಂದರ್ಭದಲ್ಲಿ ಭಾರತದಾದ್ಯಂತದ 26 ಪ್ರಮುಖ ಸಂತರನ್ನು ಸನ್ಮಾನಿಸಿ ಆಶೀರ್ವಾದ ಪಡೆಯಲಾಯಿತು.

ಭಕ್ತಿಮಯ ವಾತಾವರಣದಲ್ಲಿ ಸಮಾರೋಪ:

ವೇದಮಂತ್ರ ಪಠಣ ಮತ್ತು 'ದಿಗಂಬರಾ ದಿಗಂಬರಾ ಶ್ರೀಪಾದ ವಲ್ಲಭ ದಿಗಂಬರಾ' ಎಂಬ ಜಯಘೋಷದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಮಾರಂಭದ ಮುಕ್ತಾಯದ ವೇಳೆ ಪ.ಪೂ. ಟೆಂಬೆ ಸ್ವಾಮಿ ವಿರಚಿತ 'ದತ್ತ ತ್ರಿಪದಿ'ಯನ್ನು ಶ್ರೀ ಶಿರೀಷಕುಮಾರ್ ಮತ್ತು ಶ್ರೀ ಅರುಣಕುಮಾರ್ ಉಪಾಧ್ಯೆ ಅವರು ವಯಲಿನ್ ಮೂಲಕ ಪ್ರಸ್ತುತಪಡಿಸಿದ್ದು, ಇಡೀ ವಾತಾವರಣ ಭಕ್ತಿಮಯವಾಗಿತ್ತು.

'ಶ್ರೀ ಪ.ಪೂ. ಶ್ರೀ ವಾಸುದೇವಾನಂದ ಸರಸ್ವತಿ ಟೆಂಬೆ ಸ್ವಾಮಿ ಮಹಾರಾಜರು ಮತ್ತು ಶ್ರೀ ಪ. ಪೂ. ಶ್ರೀ ಲೋಕನಾಥತೀರ್ಥ ಸ್ವಾಮಿ ಮಹಾರಾಜ ಟ್ರಸ್ಟ್' ವತಿಯಿಂದ ಈ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

## ಮುಳಬಾಗಿಲಿನಲ್ಲಿ ಕುಂಭಮೇಳದ ಮಾದರಿ ವೈಭವ; ಭಕ್ತರ ಹರ್ಷ



ಮುಳಬಾಗಿಲು

ತಾಲ್ಲೂಕಿನ ಪ್ರಸಿದ್ಧ ಹಾಗೂ ಐತಿಹಾಸಿಕ ವಿರೂಪಾಕ್ಷಿ ದೇವಾಲಯದಲ್ಲಿ ಲೋಕ ಕಲ್ಯಾಣಾರ್ಥವಾಗಿ ಹಮ್ಮಿಕೊಳ್ಳಲಾಗಿರುವ ಏಳು ದಿನಗಳ 'ಕಾಲ ಶ್ರೀ ರುದ್ರ ಮಹಾಯಜ್ಞ'ಕ್ಕೆ ಸೋಮವಾರ ಅದ್ದೂರಿ ಚಾಲನೆ ದೊರೆಯಿತು. ಹಿಂದೂ ಸನಾತನ ಸಮಿತಿ ಹಾಗೂ ಸ್ಥಳೀಯರ ಸಹಯೋಗದೊಂದಿಗೆ ಆಯೋಜಿಸಲಾಗಿರುವ ಈ ಯಾಗದ ಅಂಗವಾಗಿ ಹತ್ತಾರು ನಾಗ ಸಾಧುಗಳು ನಡೆಸಿದ ಶೋಭಾಯಾತ್ರೆಯು ಸಾರ್ವಜನಿಕರ ಗಮನ ಸೆಳೆಯಿತು.

ನಗರದ ಮುತ್ಯಾಲಪೇಟೆ ಗಂಗಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು. ಕುಂಭಮೇಳದಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕಾಣಸಿಗುವ ನಾಗ ಸಾಧುಗಳು ಮುಳಬಾಗಿಲಿನ ಬೀದಿಗಳಲ್ಲಿ ಸಂಚರಿಸಿದ್ದು ಭಕ್ತರಲ್ಲಿ ಕುತೂಹಲ ಮತ್ತು ಭಕ್ತಿ ಮೂಡಿಸಿತು. ಮಹಿಳೆಯರು ಪೂರ್ಣಕುಂಭ ಕಳಸಗಳೊಂದಿಗೆ ನಾಗ ಸಾಧುಗಳನ್ನು ಸ್ವಾಗತಿಸಿ, ಆಶೀರ್ವಾದ ಪಡೆದರು.

ಕಠಿಣ ನಿಯಮಗಳು ಮತ್ತು ವಿಶಿಷ್ಟ ಜೀವನಶೈಲಿಗೆ ಹೆಸರಾದ ನಾಗ ಸಾಧುಗಳ ಉಪಸ್ಥಿತಿಯು ಈ ಮಹಾಯಜ್ಞಕ್ಕೆ ವಿಶೇಷ ಮೆರುಗು ನೀಡಿದೆ.

ಅಸ್ತವ್ಯಸ್ತ ಕೂದಲು ಮತ್ತು ಭಸ್ಮಧಾರಿತ ದೇಹದೊಂದಿಗೆ ಕಾಣಿಸಿಕೊಳ್ಳುವ ಇವರು, ದೈವಿಕ ಶಕ್ತಿಯ ಆರಾಧಕರಾಗಿದ್ದು, ದೀಕ್ಷೆ ಪಡೆದ ನಂತರ ಅತ್ಯಂತ ಶಿಸ್ತುಬದ್ಧ ಹಾಗೂ ಕಠಿಣ ದೈನಂದಿನ ಕಾಯಕಗಳನ್ನು ಪಾಲಿಸುತ್ತಾರೆ. ಲೋಕದ ಒಳಿತಿಗಾಗಿ ವಿರೂಪಾಕ್ಷಿ ಕ್ಷೇತ್ರದಲ್ಲಿ ನಡೆಯಲಿರುವ ಈ ಮಹಾಯಾಗದಲ್ಲಿ ಇವರು ಭಾಗವಹಿಸುತ್ತಿರುವುದು ಭಕ್ತರ ಪಾಲಿಗೆ ವಿಶೇಷ ಸಂದರ್ಭವಾಗಿದೆ.

ಮುಂದಿನ ಏಳು ದಿನಗಳ ಕಾಲ ಕ್ಷೇತ್ರದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು ಜರುಗಲಿವೆ.

## 6 ವರ್ಷ ಹೋರಾಟಕ್ಕೆ ಫಲ



ಶ್ರೀನಿವಾಸಪುರ

ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಂಜಲನಗರ ಗ್ರಾಮದಲ್ಲಿ ಸರ್ಕಾರಿ ಬಂಜರು ಭೂಮಿ ಹಾಗೂ ಕುಂಟೆಯನ್ನು ಒತ್ತುವರಿ ಮಾಡಿಕೊಂಡಿದ್ದ ಪ್ರಭಾವಿಗಳ ವಿರುದ್ಧ ಸುಮಾರು 6 ವರ್ಷಗಳಿಂದ ಸತತ ಹೋರಾಟ ನಡೆಸುತ್ತಿದ್ದ ಕೆ. ಹಿರಣ್ಯಗೌಡ ಅವರ ಶ್ರಮಕ್ಕೆ ಕೊನೆಗೂ ಫಲ ಸಿಕ್ಕಂತಾಗಿದೆ. ತಹಶೀಲ್ದಾರ್ ಜಿ.ಎನ್. ಸುಧೀಂದ್ರ ಅವರು ಸ್ಥಳಕ್ಕೆ ಖುದ್ದು ಭೇಟಿ ನೀಡಿ ಒತ್ತುವರಿದಾರರ ವಿರುದ್ಧ ವರದಿ ನೀಡುವ ಮೂಲಕ ಸರ್ಕಾರಿ ಜಮೀನು ಉಳಿಸುವಲ್ಲಿ ಮಹತ್ತರ ಹೆಜ್ಜೆ ಇಟ್ಟಿದ್ದಾರೆ.

ನ್ಯಾಯಾಲಯದ ತಡೆಯಾಜ್ಞೆ ಉಲ್ಲಂಘಿಸಿ ಒತ್ತುವರಿ: ಗ್ರಾಮದ ಸರ್ವೆ ನಂ. 6ರಲ್ಲಿನ ಸರ್ಕಾರಿ ಜಮೀನನ್ನು ಅದೇ ಗ್ರಾಮದ ಪಾರ್ವತಮ್ಮ ಹಾಗೂ ಅವರ ಮಕ್ಕಳಾದ ಎಂ.ಎನ್. ರಮೇಶ್ ಮತ್ತು ಎಂ.ಎನ್. ವಿಶ್ವನಾಥ್ ಒತ್ತುವರಿ ಮಾಡಿಕೊಂಡಿರುವ ಆರೋಪ ಕೇಳಿಬಂದಿತ್ತು. ಈ ಜಾಗಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಿಂದ ಪಡೆದಿದ್ದ 61/1ರ ಅಕ್ರಮ ಖಾತೆಗಳು ಇಒ ನ್ಯಾಯಾಲಯದಲ್ಲಿ ರದ್ದಾಗಿದ್ದವು. ಈ ವಿಷಯವಾಗಿ ಹೈಕೋರ್ಟ್‌ನಲ್ಲಿ ಪ್ರಕರಣ ವಿಚಾರಣ ಹಂತದಲ್ಲಿದ್ದು, ನ್ಯಾಯಾಲಯ ನೀಡಿದ್ದ ತಡೆಯಾಜ್ಞೆಯನ್ನು ಉಲ್ಲಂಘಿಸಿ ಒತ್ತುವರಿದಾರರು ಅಲ್ಲಿ ಕಾಂಪೌಂಡ್ ಗೋಡೆ ಹಾಗೂ ಶೆಡ್ ನಿರ್ಮಿಸಿರುವುದು ತಹಶೀಲ್ದಾರ್ ಭೇಟಿ ವೇಳೆ ದೃಢಪಟ್ಟಿದೆ.

ಪಿಡಿಒ ಎಂ. ಕೃಷ್ಣ ವಿರುದ್ಧ ಅಕ್ರಮದ ಆರೋಪ: ಲಕ್ಷ್ಮೀಸಾಗರ ಗ್ರಾ.ಪಂ.ನ ಅಂದಿನ ಪಿಡಿಒ ಎಂ. ಕೃಷ್ಣ (ಪ್ರಸ್ತುತ ಪುಲಗೂರು ಕೋಟೆ ಪಿಡಿಒ) ಅವರು ಕಾನೂನು ಚೌಕಟ್ಟು ಮೀರಿ ಅಕ್ರಮ ಎಸಗಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಹಿರಣ್ಯಗೌಡ ಅವರು ತಕರಾರು ಅರ್ಜಿ ಸಲ್ಲಿಸಿದ್ದರೂ ಲೆಕ್ಕಿಸದೆ, ನಿಯಮಬಾಹಿರವಾಗಿ ಅಂದಿನ ಆಡಳಿತಾಧಿಕಾರಿಯವರಿಂದ 22.10.2020 ರಂದು ಸಹಿ ಮಾಡಿಸಿ ಮನೆ ನಿರ್ಮಾಣಕ್ಕೆ ಪರವಾನಗಿ ವಿತರಿಸಿರುವುದು ಬೆಳಕಿಗೆ ಬಂದಿದೆ.

ವರದಿ ನೀಡಲು ಇಒ ವಿಳಂಬ: ಪಿಡಿಒ ಕೃಷ್ಣ ಅವರು ಮಾಡಿರುವ ಇತರೆ ಅಕ್ರಮಗಳ ಬಗ್ಗೆಯೂ ಕೆ. ಹಿರಣ್ಯಗೌಡ ಅವರು ಪ್ರಾದೇಶಿಕ ಆಯುಕ್ತರ ಆದೇಶದಂತೆ ಸಿಇಒ ಅವರಿಗೆ ದೂರು ನೀಡಿದ್ದರು. ಈ ಕುರಿತು ತಾಲ್ಲೂಕು ಪಂಚಾಯಿತಿ ತಂಡವು ವಿಚಾರಣೆ ನಡೆಸಿ ವ್ಯವಸ್ಥಾಪಕರು ಇಒ ಅವರಿಗೆ ವರದಿ ಸಲ್ಲಿಸಿ ಎರಡು ತಿಂಗಳು ಕಳೆದಿದೆ. ಆದರೆ, ಶ್ರೀನಿವಾಸಪುರ ಇಒ ಅವರು ಈ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸದೆ ಇರುವುದು ಸಾರ್ವಜನಿಕರಲ್ಲಿ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಸರ್ಕಾರಿ ಆಸ್ತಿ ಕಬಳಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿರುವ ತಹಶೀಲ್ದಾರ್ ಸುಧೀಂದ್ರ ಅವರ ಕಾರ್ಯವೈಖರಿಗೆ ಸಾರ್ವಜನಿಕರಿಂದ ಶ್ಲಾಘನೆ ವ್ಯಕ್ತವಾಗಿದೆ.

## 'ಸಂಯಮ ಪ್ರಶಸ್ತಿ' ಪ್ರದಾನ ಸಮಾರಂಭ

ಬೆಂಗಳೂರು

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ಸಂಯಮ ಪ್ರಶಸ್ತಿ' ಪ್ರದಾನ ಸಮಾರಂಭವು ಇದೇ 31ರ ಮಂಗಳವಾರದಂದು ನಗರದ ಗಾಂಧಿ ಭವನದಲ್ಲಿ ಜರುಗಲಿದೆ. ಕಳೆದ ಮೂರು ವರ್ಷಗಳ (2023, 2024 ಮತ್ತು 2025) ಪ್ರಶಸ್ತಿಗಳನ್ನು ಗಣ್ಯರಿಗೆ ಈ ಸಂದರ್ಭದಲ್ಲಿ ವಿತರಿಸಲಾಗುವುದು.


ಮುಖ್ಯಮಂತ್ರಿಗಳಿಂದ ಪ್ರಶಸ್ತಿ ಪ್ರದಾನ ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿರುವ ಗಾಂಧಿ ಭವನದ ಮಹಾದೇವ ದೇಸಾಯಿ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಗೌರವಾನ್ವಿತ ಪ್ರಶಸ್ತಿ ಪುರಸ್ಕೃತರು: ಸಮಾಜದಲ್ಲಿ ಮದ್ಯಪಾನ ಸಂಯಮ ಮತ್ತು ಜಾಗೃತಿ ಮೂಡಿಸುವಲ್ಲಿ ಶ್ರಮಿಸಿದ ಈ ಕೆಳಗಿನ ಗಣ್ಯರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ:

2023ನೇ ಸಾಲಿಗೆ: ಡಿ.ಆರ್. ಪಾಟೀಲ (ಉಪಾಧ್ಯಕ್ಷರು, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ).

2024ನೇ ಸಾಲಿಗೆ: ಬಿ.ಆರ್. ಪಾಟೀಲ್ (ಉಪಾಧ್ಯಕ್ಷರು, ರಾಜ್ಯ ನೀತಿ ಮತ್ತು ಯೋಜನಾ ಆಯೋಗ).

2025ನೇ ಸಾಲಿಗೆ: ನಾಡೋಜ ಡಾ. ವೂಡೇ ಪಿ. ಕೃಷ್ಣ (ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ).



ಸಚಿವರಾದ ಎಚ್.ಕೆ. ಪಾಟೀಲ, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಸಚಿವರು ಹಾಗೂ ಸಂಸದರಾದ ಪಿ.ಸಿ. ಮೋಹನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಂಯಮ ಮಂಡಳಿಯ ಅಧ್ಯಕ್ಷ ಶರಣಪ್ಪ ಸಲಾದಪುರ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉನ್ನತ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.



ವಿಜಯಪುರ ಪಟ್ಟಣದ ಕೆ.ಎಸ್.ರಸ್ತೆ ಬಳಿ ಇರುವ ಅರಳಿಕಟ್ಟೆ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀರಾಮನವಮಿಯ ಅಂಗವಾಗಿ, ಗಡ್ಡದನಾಯಕನಹಳ್ಳಿಯ ದುರ್ಗಾಮಹೇಶ್ವರಿ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ ನಡೆಯಿತು. ಭಕ್ತರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಣೆ ಮಾಡಲಾಯಿತು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy